ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರಾದ ಶ್ರೀ ಸಿಂಧ್ಯಾ ರವರು ಹೇಳಿದ ಹಾಗೆ ವಿದ್ಯಾರ್ಥಿಗಳನ್ನು ನಾವು ಭೇಟಿ ಮಾಡಿದೇ ಇರಲಿಲ್ಲ. ಅವರು ನಮ್ಮ ಹತ್ತಿರ ಬಂದಿದ್ದರು ಮತ್ತು ಸುದೀರ್ಘವಾದ ಚರ್ಚೆ ನಡೆದಿತ್ತು. ನಾನು ಕೂಡ ಮೆಡಿಕಲ್ ಫ್ಯಾಕಲ್ಟಿಯ ಅಧಿಕಾರಿಗಳನ್ನೆಲ್ಲ ಕರೆಸಿಮಾತನಾಡಿದ್ದೇನೆ. ಆದೇರೀತಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಕೂಡ ಪತ್ರ ಬರೆದು ವಿದ್ಯಾರ್ಥಿಗಳಿಗೆ ಆದ ಅನ್ಯಾಯವನ್ನು ಸರಿಪಡಿಸಬೇಕೆಂದು ಕೇಳಿದ್ದೇವೆ. ಇನ್ನು ಎರಡು ಮೂರು ದಿನಗಳಲ್ಲಿ ಇದನ್ನು ಸರಿಪಡಿಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಹಾಗೆ ನಾವು ಏರ್ಪಾಡು ಮಾಡುತ್ತೇವೆ.

ನಾಗರಹೊಳೆ ಅರಣ್ಯದಲ್ಲಿ ಐದು ಹುಲಿಗಳನ್ನು ಕೊಂದಿರುವ ಬಗ್ಗೆ

† **ಶ್ರೀಮತಿ ಚಂದ್ರಪ್ರಭಾ ಅರಸ್**.—ನಾಗರಹೊಳೆ ಅರಣ್ಯದಲ್ಲಿ ಐದು ಹುಲಿಗಳನ್ನು ಕೊಂದಿರುವ ಬಗ್ಗೆ ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನೆ ಮತ್ತು ಅರಣ್ಯ ಸಚಿವರು),—ಮಾನ್ಯ ಅಧ್ಯಕ್ಷರೇ, ನಾಗರಹೊಳೆ ಅಭಯಾರಣ್ಯದಲ್ಲಿ ದಿನಾಂಕ ೬-೩-೯೦ ರಿಂದ ೪-೫-೯೦ರಲ್ಲಿ ಐದು ಹುಲಿಗಳು ಸತ್ತು ಹೋಗಿದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ಮೇಲಿನ ಐದು ಹುಲಿಗಳ ಪೈಕಿ ಒಂದು ಹುಲಿಯು ದಿನಾಂಕ ೨೨-೩-೯೦ರಂದು ಸಂತಾಪುರದಲ್ಲಿ ಸಂಶೋಧನೆ ಯೋಜನೆಯಡಿ ಎಲಿಕ್ಟ್ರಾನಿಕ್ ಕಾಲರ್ ಹಾಕಲಾಗಿದ್ದು, ಸತ್ತಿರುತ್ತದೆ. ಉಳಿದ ನಾಲ್ಕು ಹುಲಿಗಳು ಮೇಲಿನ ಯೋಜನೆಯ ಕಾರ್ಯಕ್ರಮದಡಿ ಹಿಡಿದಿರುವುದಲ್ಲ. ಈ ಹುಲಿಗಳು ಸತ್ತಿರುವುದು ಸಾರ್ವಜನಿಕರ ಮನಸ್ಸಿನಲ್ಲಿ ಸಂಶಯವನ್ನು ಉಂಟು ಮಾಡಿರುವುದರಿಂದ ಈ ಕೂಡಲೇ ರೇಡಿಯೋ ಕಾಲರಿಂಗ್ ಮಾಡಿಸುವುದನ್ನು ನಿಲ್ಲಿಸಲಾಗಿರುವುದು. ಇದಲ್ಲದೆ ಈ ಹುಲಿಗಳ ಸಾವಿಗೆ ಕಾರಣವನ್ನು ಸಮರ್ಥ ತಜ್ಞರ ಕಡೆಯಿಂದ ತನಿಖೆ ಮಾಡಿಸಿ, ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಅಧ್ಯಕ್ಷರೇ, ನಾಗರಹೊಳೆ ಕೇವಲ ಕೆಲವು ಮಿಟರ್‌ಗಳ ಅಂತರದಲ್ಲಿ ನಮ್ಮ ತಾಲ್ಲೂಕು ಕ್ಷೇತ್ರದ ಸನಿಹದಲ್ಲಿ ಬರತಕ್ಕಂಥ ಬಹಳ ಸುಂದರವಾದ, ಪ್ರಕೃತಿದತ್ತವಾದ ಅರಣ್ಯವಾಗಿದೆ. ಅಲ್ಲಿ ಹುಲಿಗಳನ್ನು ಸಂರಕ್ಷಿತ ಪ್ರಾಣಿಯೆಂದು ಪರಿಗಣಿಸಿ ಟೈಗರ್ ಪ್ರಾಜೆಕ್ಟ್ ಅಂತ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲದೆ ವಿಶಾಲವಾದ ಬಹಳ ಸುಂದರವಾದ ಈ ಪ್ರಾಣಿಗಳನ್ನು, ಅಲ್ಲಿ ಸಂರಕ್ಷಿಸಿ ಅವುಗಳ ಸಂತತಿ ಬೆಳೆಯಬೇಕೆನ್ನುವ ಕಾರಣದಿಂದ ಈ ಕಾಡುಪ್ರದೇಶದಲ್ಲಿ ಅವುಗಳಿಗೆ ಎಲ್ಲ ರೀತಿಯ ರಕ್ಷಣೆಯನ್ನು ಒದಗಿಸಿಕೊಟ್ಟಿದ್ದು ಅವುಗಳ ಸಂಖ್ಯೆ ಇತ್ತೀಚೆಗೆ ೧೧-೧೨ರ ಮೇಲಿದೆಯೆಂದು ತಿಳಿದುಬಂದಿದೆ. ನಾವು ಪ್ರಕೃತಿ ಪ್ರೇಮಿಗಳಾಗಿರುವುದರಿಂದ ಆಗಾಗ ವರ್ಷಕ್ಕೊಮ್ಮೆಯಾದರೂ ಅಲ್ಲಿ ಹೋಗಿಬರುವ ಪರಿಪಾಠವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಕೇವಲ ೨ ತಿಂಗಳಲ್ಲಿ ಅಂದರೆ ೬-೩-೯೦ ರಿಂದ ೪-೫-೯೦ರ ಅವಧಿಯಲ್ಲಿ ಐದು ಹುಲಿಗಳು ಸತ್ತುಹೋಗಿರುವ ವರದಿ ಬಂದಿದೆಯೆಂದು ಹೇಳುತ್ತಾರೆ.

ಮತ್ತು ತನಿಖೆಯನ್ನು ಮುಂದುವರಿಸಿದ್ದೇವೆಂದು ಹೇಳುತ್ತಿದ್ದಾರೆ. ಅಲ್ಲಿ ಆ ಹುಲಿಗಳು ಸತ್ತ ಕಾರಣ ಏನು, ಈ ಸಾವಿಗೆ ಕಾರಣರು ಯಾರಾದರೂ ಎನ್ನುವುದು ಇವತ್ತಿನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವರದಿ ಬಂದಿದೆ. ಶ್ರೀಮಾನ್ ಉಲ್ಲಾಸ್ ಕಾರಂತ್ ಅವರ ಮೂಲಕ, ರಾಜ್ಯ ಸರ್ಕಾರ ವಂಶ್ರು ಕೇಂದ್ರ ಸರ್ಕಾರದ ವತಿಯಿಂದ ಯೋಜನೆಯೊಂದನ್ನು ನಡೆಸಿದ್ದಾರೆ. ಅದರ ಮೇಲೆ ಪ್ರಯೋಗ ಮಾಡತಕ್ಕ ಒಂದು ಯೋಜನೆ. ಎಲೆಕ್ಟ್ರಾನಿಕ್ ಡಿವೈಸಸ್ ಅನ್ನು ಆದರ ಕೊರಳಪಟ್ಟಿಗೆ ಅಳವಡಿಸಿ, ಅದರ ಚಲನವಲನಗಳ ಮೇಲೆ ಒಂದು ಸಂಶೋಧನೆಯನ್ನು ನಡೆಸುತ್ತಿದ್ದೇವೆಂದೂ ಹೇಳಿರತಕ್ಕಂಥ ಪ್ರಯೋಗ. ಈ ಪ್ರಯೋಗ ಮಾಡತಕ್ಕ ಸಂದರ್ಭದಲ್ಲಿ ನಮ್ಮ ಪರಿಸರದಲ್ಲಿ ಮತ್ತು ಇಲ್ಲಿನ ವಾತಾವರಣದಲ್ಲಿ ಹುಲಿಗಳ ಮೇಲೆ ಆಗತಕ್ಕ ಪರಿಣಾಮ ಏನು ಎನ್ನುವುದರ ಬಗ್ಗೆ ಅವರು ಗಮನ ಹರಿಸಿದ್ದಾರೆಯೇ ಅಥವಾ ಸಂಬಂಧಪಟ್ಟ ವೈದ್ಯರುಗಳು ಮಾಹಿತಿ ಕೊಟ್ಟಿದ್ದಾರೆಯೋ ಇಲ್ಲವೋ ಗೊತ್ತಾಗಿ ಬಂದಿಲ್ಲ. ಮತ್ತು ಸತ್ತ ಹುಲಿಗಳನ್ನು ವೈಜ್ಞಾನಿಕ ಹಾಗೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಂಥ ರಿಪೋರ್ಟ್‌ನ ವಿವರಣೆ ಇದರಲ್ಲಿ ಇಲ್ಲ. ನನಗೆ ತಿಳಿದಮಟ್ಟಿಗೆ, ಸುಮಾರು ಏಪ್ರಿಲ್ ತಿಂಗಳಲ್ಲಿ ಅಲ್ಲಿ ಒಂದು ದಿನ ತಂಗಿದ್ದ ಸಮಯದಲ್ಲಿ, ಒಂದು ಹುಲಿಗೆ ಪ್ರಾಣಾಪಾಯ ಇತ್ತು. ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದಾಗ, ನಾವು ಅದನ್ನು ನೋಡುವುದಕ್ಕೆ ಅಪೇಕ್ಷೆ ಪಟ್ಟಾಗ,

ಕೆಲವಾರು ಕಿಲೊ ಮೀಟರ್ ಅರಣ್ಯದೊಳಗೆ ಹೋಗಬೇಕಾಗಿರುವುದರಿಂದ, ಹೋಗುವುದು ನಿಮಗೆ ಕಷ್ಟವಾಗುತ್ತದೆ ಎಂದು ಹೇಳಿ, ನಮ್ಮನ್ನು ಹೋಗುವುದನ್ನು ತಡೆಹಿಡಿದರು. ನಮಗೆ ತಿಳಿದುಬಂದ ಮಾಹಿತಿ ಪ್ರಕಾರ, ಕಾಡಿನ ಕಾಡುಕುರುಬರು ಮತ್ತು ಅಲ್ಲಿ ನಿತ್ಯ ಓಡಾಡತಕ್ಕ ಜನಗಳನ್ನು ಕೇಳಿದಾಗ ಅವರು ಅವುಗಳ ಚಲನವಲನಗಳ ಬಗ್ಗೆ ಹೇಳಿದರು. Megahts ಎನ್ನತಕ್ಕ ಔಷಧಿಯನ್ನು ಕೊಡುತ್ತಾರೆ, ಅದರ ಡೋಸೇಜ್ ಜಾಸ್ತಿಯಾಗಿ, ಅದರಿಂದ ನೋವು ಜಾಸ್ತಿಯಾಗಿ, ಕೂಳೆತು ಗಾಯವಾಗಿ, ಅದರ ನೋವಿನಿಂದ ಆಹಾರವನ್ನು ತಿನ್ನಲಾರದೆ ಒಂದೊಂದು ಸಾವಿಗೆ ಈಡಾಗುತ್ತಿವೆ. ಮಾನ್ಯ ಕಾರಂತರು ಒಂದು ಹೇಳಿಕೆಯನ್ನು, ೧೧-೬-೯೦ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಹುಲಿಗಳು ಬಡವಾಗಿ, ವಯಸ್ಸಾಗಿ ಆಹಾರವನ್ನು ತಿನ್ನಲಾರದೇ ಸತ್ತಿವೆ ಎಂದು, ಇದು ಸತ್ಯಕ್ಕೆ ದೂರವಾದ ಮಾತು. ಇವುಗಳ ಸಂಖ್ಯೆ ಪರ್ವದಲ್ಲಿ ಕೇವಲ ಕೆಲವು ಇದ್ದುದು ಈಗ ಸುಮಾರು ಸಂಖ್ಯೆ ಹೆಚ್ಚಿದೆ. ಕೇವಲ ಒಂದೆರಡು ತಿಂಗಳಲ್ಲೇ ಇಷ್ಟೊಂದು ಸಾವಿಗೆ ಕಾರಣ ಆಗಬೇಕಾದರೆ, ಮುಖ್ಯವಾಗಿ ಇವರು ಏನು ಪ್ರಯೋಗೆ ಮಾಡುತ್ತಿದ್ದಾರೆ, ಇದನ್ನು ವೈಜ್ಞಾನಿಕವಾಗಿ ಅಳವಡಿಸಿದ್ದರೂ ಕೂಡ ಆದರ ನೋವು ಜಾಸ್ತಿಯಾಗಿ ಆಹಾರವನ್ನು ತಿನ್ನಲಾರದೇ ಇರತಕ್ಕ ಪರಿಸ್ಥಿತಿಯಿಂದ ಸತ್ತಿವೆ ಎನ್ನತಕ್ಕ ವಿಚಾರವನ್ನು ಎಲ್ಲಾ ಕಾಡಿನ ನಿವಾಸಿಗಳೂ ಹೇಳುತ್ತಿದ್ದಾರೆ ಹಾಗೂ ಇದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ, ತಾವು ತರಿಸಿಕೊಂಡು ನೋಡಬೇಕು. ಮತ್ತೆ ಸತ್ತ ಪ್ರಾಣಿಯನ್ನು

ವೈದ್ಯಕೀಯ ಪರೀಕ್ಷೆಗೆ ಮೈಸೂರಿಗೆ ಕಳುಹಿಸಿದ್ದಾರೆ, ಅದರ ವರದಿಯನ್ನು ಇಲ್ಲಿ ಕೊಟ್ಟಿಲ್ಲ. ಆದ್ದರಿಂದ, ವೈದ್ಯಕೀಯ ಪರೀಕ್ಷೆಯ ವರದಿಯನ್ನು ಮಾನ್ಯ ಸಚಿವರು ತರಿಸಬೇಕೆಂದು ಹೇಳುತ್ತೇನೆ. ಮತ್ತು ಯಾವ ಪ್ರಯೋಗದ ಮೂಲಕ. ಈ ಅತೀ ವಿರಳವಾದ ಅತಿ ಸುಂದರವಾದ ಮನ್ಯ ಪ್ರಾಣಿಗಳನ್ನು ಬಲಿ ಸಂರಕ್ಷಿಸಬೇಕಾಗಿದೆಯೋ, at what cost they are going to experiment on this?...ಸಾಲ್ಮೈದು ಪ್ರಾಣಿಗಳು ಕೇವಲ ಕೆಲವೇ ವಾರಗಳಲ್ಲಿ ಸತ್ತಿರುವುದು ಅತ್ಯಂತ ದುಃಖಿದ ಸಂಗತಿ. ನಾವು ಎರಡು ಕಾಲಿನ ಪ್ರಾಣಿಗಳು, ಇಲ್ಲಿ ಅಲ್ಲಿ ಹೇಳುವುದಕ್ಕೆ ಅವಕಾಶ ಇದೆ, ಸದನದ ಹೊರಗಡೆ, ಒಳಗಡೆ ಕೂಗಾಡುತ್ತೇವೆ, ಆದರೆ ಈಗ ನಾಲ್ಕು ಕಾಲಿನ ಪ್ರಾಣಿ ಸಂರಕ್ಷಿತ ಪ್ರಾಣಿ ಏನಿದೆ, ಇವಕ್ಕೆ ಯಾರೂ ಉತ್ತೇಜಕರು ಇಲ್ಲದೆ, ಸಹಾಯಕರು ಇಲ್ಲದೆ ಇರುವಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ನಾವು ಪ್ರಕೃತಿಪ್ರಿಯರು ಎಂದು ಹೇಳುವುದು, ಪ್ರಕೃತಿ ಪರಿಸರವನ್ನು ವಿಜ್ಞಾನಿಗಳು ಎಂದು ಹೇಳಿಕೊಂಡು ಪ್ರಾಣಾಂತಿಕವಾದ ಔಷಧಿಗಳನ್ನು ಕೊಡುವುದನ್ನು ನಿಲ್ಲಿಸಬೇಕು. ಹಾಗೂ ಈ ಪ್ರಯೋಗವನ್ನೂ ಮೊದಲು ನಿಲ್ಲಿಸಬೇಕು. ಇವತ್ತಿನ ಪತ್ರಿಕೆಯಲ್ಲಿ ಬಂದಿದೆ, ವರದಿಗಾರರು ಹೋಗಿದ್ದ ಸಂದರ್ಭದಲ್ಲಿ ಪ್ರಯೋಗ ಮಾಡತಕ್ಕ ಜನಗಳು ಅಲ್ಲಿಯೇ ಮಂಡಾಮಠರಿಯಂತಿದ್ದಾರೆ. ಅದು ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಇದನ್ನು ಕೂಲಂಕುಷವಾಗಿ ಸರ್ಕಾರ ಪರಿಶೀಲನೆ ಮಾಡಿ, ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ಸಂರಕ್ಷಕ ಜೀವಿಗಳ ಮೇಲೆ ಈ

ಪ್ರಯೋಗ ಪ್ರಾರಂಭವಾದ ಮೇಲೆ ಸತ್ತಿರತಕ್ಕ ಹುಲಿಗಳು ನಿಜವಾದ ಕಾರಣದಿಂದ ಸತ್ತಿಲ್ಲ. ಇದು ಅರಣ್ಯ ಇಲಾಖೆಯ ಕಾನೂನು ವ್ಯಾಪ್ತಿಗೆ ಬರುತ್ತದೆ, ಇದನ್ನು ಸೊಕ್ತವಾಗಿ ಅಳವಡಿಸಬೇಕು ಮತ್ತು ಅವರು ಏನು ಎರಡೂವರೆ ಲಕ್ಷ ರೂಪಾಯಿಗಳ ಪರಿಹಾರ ಕೇಳಿದ್ದಾರೆ, ಇದರ ಬಗ್ಗೆ, ಏನು ಕಾರ್ಯಕ್ರಮ ಜಾರಿಗೆ ತಂದಿದ್ದಾರೆ, ಅವರಿಂದ ಪರದಿ ಬಂದಿದೆಯೇ ಎನ್ನುವುದನ್ನು ಸಚಿವರು ಈ ಸದನಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಮುಂದೆ ಈ ಪ್ರಯೋಗದ ಹೆಸರಿನಲ್ಲಿ, ಪ್ರಾಣಾಂತಿಕ ವಾಗುತ್ತಿರುವುದನ್ನು ನಿಲ್ಲಿಸಬೇಕೆಂದು ತಮ್ಮ ಮೂಲಕ ಸರ್ಕಾರದ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ವಿವರವನ್ನು ಇಲ್ಲಿ ಕೊಡಬೇಕು, ತಕ್ಷಣ ಪ್ರಯೋಗ ನಿಲ್ಲಿಸಬೇಕು. ಇಲ್ಲದೇ ಹೋದರೆ ಈ ರೀತಿಯಲ್ಲಿ ಕೊಲೆ ಮಾಡುತ್ತಾ ಹೋದರೆ ಪ್ರಯೋಜನವಾಗುವುದಿಲ್ಲ. ಪ್ರಕೃತಿ ದತ್ತವಾದ ಮನ್ಯ ಜೀವಿಗಳನ್ನು, ಸುಂದರವಾದ ಜೀವಿಗಳನ್ನು ನೋಡುವುದಕ್ಕೆ ಹೋದಂಥ ಪ್ರವಾಸಿಗರು ಬಹಳ ನಿರಾಶರಾಗಿ ಬರತಕ್ಕ ಸಂದರ್ಭ ಬಂದಿದೆ. ಇವತ್ತು ಅರಣ್ಯದಲ್ಲಿ ನಡೆಯತಕ್ಕ ಅತಿಕ್ರಮಣದಿಂದ, ಆನೆಗಳು ಕಾಡನ್ನು ಬಿಟ್ಟು ಊರಿನ ಕಡೆ ಗದ್ದೆಗಳ ಕಡೆ ಬರುತ್ತಿವೆ. ಇವತ್ತು ಕಾಡಿನಲ್ಲಿ ಆನೆಗಳು ಸಿಕ್ಕುವುದೇ ಕಷ್ಟವಾಗಿದೆ, ಸಾರ್ವಜನಿಕರ ಹಿತದೃಷ್ಟಿಯಿಂದ ನಿಯಮಿತ ವೇಳೆಯಲ್ಲಿ ಇವುಗಳನ್ನು ನೋಡಲು ಇಷ್ಟಪಡುತ್ತಿದ್ದಾರೆ. ಇದು ಇವತ್ತು ಪಬ್ಲಿಕ್ thraigh fore ಆಗಿಹೋಗಿದೆ. ಈಗ ಎಲ್ಲಾ ವಾಹನಗಳನ್ನೂ ಒಳಕ್ಕೇ ಬಿಡುತ್ತಿದ್ದಾರೆ ಸರಕಾರಿ ಬಸ್ಸುಗಳೂ, ಇತರೆ ವಾಹನಗಳೂ ಕಾಡಿನೊಳಗೆ ಪ್ರವೇಶ ಮಾಡುತ್ತಿವೆ. ಇದು ಬಹಳ ಸಂರಕ್ಷಿತವಾದ ಪ್ರದೇಶ. ಆದರೆ ಇಲ್ಲಿನಿವ ಪ್ರಾಣಿಗಳಿಗೆ ಇದು ಪ್ರಾಣಾಂತಿಕವಾಗಿದೆ. ಅವುಗಳಿಗೆ ಭಯಭೀತಿ ಉಂಟು ಮಾಡಿ ಅವು ನಿರ್ಭಯವಾಗಿ ನಿರಾಂತಕವಾಗಿ ಜೀವಿಸುವುದಕ್ಕೆ ಕಷ್ಟವಾಗಿ, ಅವುಗಳಿಗೆ ತಕ್ಕ ಪರಿಸರ ಇಲ್ಲದೆ ಹೊರಗಡೆ ಬರಬೇಕಾದ ಪರಿಸ್ಥಿತಿ ಬಂದಿದೆ. ನಮ್ಮ ಭಾರತದಲ್ಲಿರುವ ಮನ್ಯಜೀವಿಗಳ ಪೈಕಿ ಹುಲಿ ಅತ್ಯಂತ ಸುಂದರ ಪ್ರಾಣಿ. ಅದರ ಸಂತತಿ ಅತೀ

ವಿರಳವಾಗುತ್ತಾ ಹೋಗುತ್ತಿದೆ. ಅದನ್ನು ಸಂರಕ್ಷಣೆ ಮಾಡತಕ್ಕದ್ದು ಕೇವಲ ಅಧಿಕಾರಿಗಳ ಕರ್ತವ್ಯ ಅಲ್ಲ, ನಮ್ಮೆಲ್ಲರ ಆದ್ಯ ಕರ್ತವ್ಯ. ಈ ರೀತಿಯಲ್ಲಿ ಹುಲಿಗಳನ್ನು ಪ್ರಯೋಗಕ್ಕೆ ಒಳಪಡಿಸಿ ಪ್ರಾಣಾಂತಿಕವಾಗಿ ಅವುಗಳನ್ನು ಕೊಲೆ ಮಾಡತಕ್ಕದ್ದು ಜರೂರಾಗಿ ನಿಲ್ಲಿಬೇಕು ಮುಂದೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಕಾನೂನು ಪ್ರಕಾರ ಇದರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕಂಥ ಆತಂಕ ಏನಿದೆ, ನಾನು ಅದರಲ್ಲಿ ಭಾಗಿ ಆಗಿದ್ದೇನೆ. ನನಗೂ ಅಷ್ಟೇ ಆತಂಕವಾಗಿದೆ. ಅಷ್ಟೇ ಸಂಕಟವಾಗಿದೆ. ಮತ್ತೆ ಹುಲಿಗಳನ್ನು ಈ ಒಂದು ಸಂಶೋಧನೆಗೆ ಒಳಪಡಿಸಿ ಅವುಗಳನ್ನು ಕೊಲೆ ಮಾಡತಕ್ಕಂಥ ಒಂದು ಪ್ರಯತ್ನ ಏನಿದೆ, ಅದರ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅಂತಹದು ಆಗಿರಲಿಲ್ಲ. ಈಗ ಐ ಹುಲಿಗಳು ಸತ್ತಿವೆ. ಇದಕ್ಕೆ ಕಾರಣ ಏನೂ ಎಂದೂ ವಿಚಾರ ಮಾಡಬೇಕು. ಮಾನ್ಯ ಸದಸ್ಯರ ಅಭಿಪ್ರಾಯದ ಪ್ರಕಾರ ಅವು ಸಂಶೋಧನೆಗೆ ಒಳಪಟ್ಟು ಕೊಲೆ ಆಗಿದ್ದಾವೆಂದು ಹೇಳಿದ್ದಾರೆ. ನಾವು ಸತ್ತ ಹುಲಿಗಳ ಮೇಲೆ ವೈದ್ಯಕೀಯ ಪರೀಕ್ಷೆ ಏನು ನಡೆಸಿದ್ದೇವೆ, ಅದರ ಪ್ರಕಾರ, ಅವು ಸಂತಹ ಒಂದು ಪ್ರಯೋಗಕ್ಕೆ ಒಳಪಟ್ಟಿಲ್ಲ ಎಂದು ಹೇಳುತ್ತಿದ್ದಾರೆ ಅದರೆ ನಾನು ವೈದ್ಯಕೀಯ ಸರ್ಟಿಫಿಕೇಟ್‌ಗಳನ್ನು ನಾನು ಕೂಲಂಕಷವಾಗಿ ನೋಡಿದಾಗ ಅವು ಸತ್ತು ಕೊಳೆತು ನಾರಿದ ಮೇಲೆ ಇಂತಹ ಪರೀಕ್ಷೆ ಆಗಿದೆ ಅದರೆ ಅವು ಖಾಯಿಲೆಯಿಂದ ಸತ್ತಿದ್ದಾವೆ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇದು ಬಹಳ ಸುಂದರವಾದ ಪ್ರಾಣಿ. ನಾನೂ ಪ್ರಕೃತಿಯ ಆರಾಧಕ. ಮಾನ್ಯ ಫೋರ್ಡ್‌ಡೆಯವರೂ ಕೂಡಾ ಪ್ರಕೃತಿಯ ಆರಾಧಕರಾಗಿದ್ದಾರೆ. ಅವರು ನಮ್ಮ ಕ್ಯಾಬಿನೆಟ್‌ನಲ್ಲಿದ್ದಾರೆ. ಇಂತಹ ಇನ್ನೂ ಅನೇಕ ಜನ ನಮ್ಮಲ್ಲಿದ್ದಾರೆ.

ಅಧ್ಯಕ್ಷರು.—ಫೋರ್ಡ್‌ಡೆಯವರು ಪ್ರಕೃತಿಯನ್ನು ಸಹ ಸೆರೆ ಹಿಡಿಯುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಸೆರೆ ಹಿಡಿದು ಬಿಟ್ಟು ಬಿಡುತ್ತಾರೆ, ಅವರೂ ಪ್ರಕೃತಿಯ ಆರಾಧಕರು ಎಂದು ನನಗೆ ಮಾಹಿತಿ ಆಗಿದೆ. ಇಂತಹ ಸುಂದರವಾದ ಪ್ರಾಣಿಯನ್ನು ರಕ್ಷಣೆ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯ. ಎನ್‌ವಿರಾನ್‌ಮೆಂಟ್, ಎಕಾಲಜಿ ಎಂದು ನಾವು ಬಹಳ ದೊಡ್ಡ ದೊಡ್ಡದಾಗಿ ಮಾತನಾಡುತ್ತೇವೆ. ಈ ದೇಶದಲ್ಲಿ ಇದರ ರಕ್ಷಣೆ ಮಾಡತಕ್ಕದ್ದು ನಮ್ಮ ಆದ್ಯಕರ್ತವ್ಯ. ನಾನು ಮಾನ್ಯ ಸದಸ್ಯರ ಜೊತೆಗೆ ಒಟ್ಟಾಗಿ ಸೇರಿ ಶ್ರಮ ಪಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಲ್ಲಿಸಂಶೋಧಕ ಸಂಶೋಧನೆ ಮಾಡುವುದಕ್ಕೆ ಹಿಂದಿನ ಸರಕಾರದವರು ೩೧-೧೦-೬೪ರಲ್ಲಿ ಒಂದು ಪರವಾನಗಿಯನ್ನು ಅವರಿಗೆ ಕೊಟ್ಟಿದ್ದಾರೆ. ಅಲ್ಲಿಂದ ಅವರು ಸಂಶೋಧನೆ ಮಾಡುತ್ತಾ ಬಂದಿದ್ದಾರೆ. ಇವೆಲ್ಲಾ ಹುಲಿಗಳು ಸತ್ತಿರತಕ್ಕಂಥಾದ್ದು ೫-೩-೬೦ ರಿಂದ ೪-೫-೬೦ರವರೆಗೆ. ಎರಡು ತಿಂಗಳೊಳಗೆ ಸತ್ತಿವೆ ಇಂತಹ ಪ್ರಸಂಗವಾದರ ಹಿಂದೆ ಯಾವತ್ತೂ ಆಗಿಲ್ಲ ಮುಂದೆ ಆಗಬಾರದು ಅದನ್ನು ತಡೆ ಮಾಡುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತೇನೆ. ಇದರ ಹಿಂದೆ ಈ ಕಾರಣದಿಂದ ಹುಲಿಗಳು ಸತ್ತಿಲ್ಲ. ಅದಕ್ಕೆ ನನಗೆ ಸಂಶಯ ಬರುತ್ತದೆ. ಅದಕ್ಕೋಸ್ಕರ ಸೂಕ್ತ ಕ್ರಮ ತೆಗೆದುಕೊಂಡು ತಜ್ಞರ ಕಡೆಯಿಂದ ಇದನ್ನು ತನಿಖೆ ಮಾಡಿಸುತ್ತೇನೆಂದು ನಾನು ಹೇಳಿದ್ದೇನೆ. ಹಿಂದಿನ ಸರ್ಕಾರದವರು ಶ್ರೀ ಉಲ್ಲಾಸ್ ಕಾರಂತ್‌ರವರಿಗೆ ಸಂಶೋಧನೆ ಮಾಡುವುದಕ್ಕೆ ಪರವಾನಿಗೆ ಯನ್ನು ಕೊಟ್ಟಿದ್ದರು. ಆ ಪರವಾನಿಗೆಯನ್ನು ಈಗ ರದ್ದು ಮಾಡಿದ್ದೇವೆ. ಅವರು ಈಗ ಇಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಇವತ್ತು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ.—ಸುಳ್ಳು. ಪತ್ರಿಕೆಗಳಲ್ಲಿ ಬರಲಿ. ನಾನಂ ಜವಾಬ್ದಾರಿಯಿಂದ ಈ ಸದನದಲ್ಲಿ ಹೇಳುತ್ತಿದ್ದೇನೆ. ಇನ್ನು ಮುಂದೆ ಅವರು ಸಂಶೋಧನೆ ಮಾಡುವುದಕ್ಕೆ ನಾವು ಅವಕಾಶ ಮಾಡಿ ಕೊಡುವುದಿಲ್ಲ. ವನ್ಯ ಮೃಗಗಳ ಸಂರಕ್ಷಣೆಯನ್ನು ಮಾಡತಕ್ಕಂಥಾದ್ದು ನಮ್ಮ ಕರ್ತವ್ಯ. ಅದಕ್ಕಾಗಿಯೇ ನಾವು ಅರಣ್ಯ ಪ್ರಯೋಗಾಲಯದಲ್ಲಿ ಒಂದು ಪ್ರತ್ಯೇಕ ಪ್ರಯೋಗಾಲಯವನ್ನು ಮಾಡಿದ್ದೇವೆ. ಅಲ್ಲಿಗೆ ಒಬ್ಬ ದೊಡ್ಡ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ, ಇನ್ನು ಮುಂದೆ ಇಂತಹ ಪ್ರಸಂಗಗಳು ಆಗದಂತೆ ನಾವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮತ್ತು ಇಂತಹ ಕಾಡುಗಳಲ್ಲಿ ಕಾರುಗಳಾಗಲಿ, ಲಾರಿಗಳಾಗಲಿ ಹೋಗುವುದಕ್ಕೆ ಪ್ರವೇಶ ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದು ವೇಳೆ ಆ ರೀತಿ ಏನಾದರೂ ಇದ್ದರೆ ನಾವು ಕೂಡಲೇ ನಿರ್ಭಂದ ಮಾಡುತ್ತೇವೆ. ಕಾರುಗಳು ಮತ್ತು ಲಾರಿಗಳು ಹೋಗುವುದಕ್ಕೆ ಬಿಡುವುದಿಲ್ಲ. ಅದಕ್ಕೆ ಒಂದು ಕಾನೂನು ಸಹ ಇದೆ. ಕಾಡುಗಳ ಮಧ್ಯದಲ್ಲಿ ಇಂತಹ ವಾಹನಗಳು ಪ್ರವೇಶ ಮಾಡಿದರೆ ವನ್ಯ ಮೃಗಗಳ

ೀಪನಕ್ಕೆ ಶಾಂತಿ ಭಂಗವುಂಟಾಗಿ ಅವು ಜಿಲ್ಲಾಪಿಲ್ಲಿಯಾಗಿ ಓಡಿ ಹೋಗುತ್ತವೆ. ಅವು ಬೆಳೆಯುವುದಕ್ಕೆ ತಗುವುದಿಲ್ಲ ಎಂಬ ವಾದ ಇದೆ. ಆದಕ್ಕೆ ಕಾಡಿನ ಹೊರಗಡೆ ಬಸ್ಸು ಲಾರಿಗಳು, ಕಾರುಗಳು ಹೋಗ ಬೇಕೆಂದು ಒಂದು ನಿರ್ಧಾರ ಮಾಡಿದ್ದೇವೆ. ನಾನು ಕೊಟ್ಟ ಉತ್ತರದಿಂದ ತಮಗೆಲ್ಲಾ ತೃಪ್ತಿಯಾಗಿರ ಬಹುದು. ಇನ್ನು ಮುಂದೆ ಇಂತಹ ಸಂಶೋಧನೆಗಳಿಗೆ ನಾವು ಅವಕಾಶ ಮಾಡಿ ಕೊಡುವುದಿಲ್ಲ. ಇದನ್ನು ತಡೆಯಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆಸುಕೊಳ್ಳಬೇಕೋ ಆ ಎಲ್ಲಾ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ವನ್ಯ ಮೃಗಗಳ ಅಭಿವೃದ್ಧಿಗೆ ಏನೇನು ಮಾಡಬೇಕೋ ಆ ಎಲ್ಲಾ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಅಷ್ಟೇ ಅಲ್ಲ ಯಾರು ಇದಕ್ಕೆ ಕಾರಣರಾಗಿದ್ದಾರೆ ಅಂದರೆ ಹುಲಿಗಳನ್ನು ಸಾಯಿಸಲು ಕಾರಣರಾಗಿದ್ದಾರೆ ಅವರು ಸಂಶೋಧಕರಾಗಿರ ಬಹುದು ಅಥವಾ ಹುಲಿಗಳನ್ನು ಸಾಯಿಸಲು ಅವಕಾಶ ಮಾಡಿಕೊಟ್ಟರೋ ಅವರ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕೆ ನಿರ್ಧಾರ ಮಾಡಿದ್ದೇವೆ ಮಾನ್ಯ ಸದಸ್ಯರು ಹೇಳಿದಹಾಗೆ ಸಂಶೋಧಕರು ಹುಲಿಗೆ ಎಲೆಕ್ಟ್ರಿಕ್ ಪಟ್ಟಿ ಕಟ್ಟಿ ಅದರಿಂದ ಏನಾದರೂ ಹುಲಿ ಸತ್ತಿದ್ದರೆ ಮತ್ತು ವನ್ಯ ಮೃಗಗಳ ಸಾವಿಗೆ ಕ್ರೂರವಾಗಿ ಏನಾದರೂ ವರ್ತನೆ ಮಾಡಿದ್ದರೆ ಅವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಹುಲಿ ಸಾವಿಗೆ ಯಾರು ಕಾರಣರೋ ಅವರಿಂದ ಒಂದು ಹುಲಿಗೆ ೫೦ ಸಾವಿರ ರೂಪಾಯಿಗಳ ದಂಡ ವಿಧಿಸಿ ಆ ಪಣ ಅವರಿಂದ ವಸೂಲು ಮಾಡುವುದಕ್ಕೆ ಅವರ ರೆವಿನ್ಯೂ ಆರಿಯರ್ಸ್ ಪ್ರಕಾರ ಅವರ ಆಸ್ತಿ ಮಂಟ್ಟುಗೋಲು ಹಾಕಿ ಅವರಿಂದ ಆ ಹಣ ವಸೂಲಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

(ಗೊಂದಲ)

† ಶ್ರೀ ಆರ್. ಎನ್. ನಾಯಕ್(ಭಟ್ಕಳ). — ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದವರು ಹುಲಿಗಳ ಮೇಲೆ ಪ್ರಯೋಗ ನಡೆಸುವುದಕ್ಕೆ ಅವಕಾಶವನ್ನು ಶ್ರೀ ಉಲ್ಲಾಸ್‌ಕಾರಂತರಿಗೆ ಮಾಡಿ ಕೊಟ್ಟಿದ್ದರು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇಂತಹ ಪ್ರಖ್ಯಾತಿ ಹೊಂದಿರತಕ್ಕಂಥ ಕುಟುಂಬದ ಸದಸ್ಯರಿಗೆ ಇನ್ನೂ ಪ್ರಖ್ಯಾತಿ ಆಗುವುದಕ್ಕೆ ಅವರ ಹಲವಾರು ಹವ್ಯಾಸಗಳಿಗೆ ಹಿಂದಿನ ಸರ್ಕಾರ ಬಹಳ ಅವಕಾಶಗಳನ್ನು ಏನು ಮಾಡಿಕೊಟ್ಟಿದ್ದರು. ಅದರಲ್ಲಿ ಇದೂ ಒಂದು ಇಂತಹ ಇನ್ನೂ ಎಷ್ಟೋ ಉದಾಹರಣೆಗಳು ಇವೆ ಇದರಲ್ಲಿ ಅವರು ವಿಜ್ಞಾನಿಗಳೇ ಇರಲಿ ಅಥವಾ ಸಾಮಾನ್ಯ ಮನುಷ್ಯರೇ ಆಗಿರಲಿ ಅವರು ಒಂದು ಹುಲಿಯನ್ನು ಸಾಯಿಸಿದರೆ ಕಾನೂನು ಏನು ಹೇಳುತ್ತದೆ. ಅಪರನ್ನು ನಾನ್ ಬೇಲ್ ಮೇಲೆ ಕೇಸ್ ಹಾಕಿ ಅವರನ್ನು ಪೋಲೀಸ್ ಇಲಾಖೆಯವರು ಆಗಲಿ ಅಥವಾ ಫಾರೆಸ್ಟ್ ಇಲಾಖೆಯವರು ಆಗಲಿ ಹಿಡಿದುಕೊಂಡು ಹೋಗಿ ಜೈಲಿಗೆ ಹಾಕಬೇಕು, ಅಥವಾ ಬಂಧಿಸಬೇಕು ಆಮೇಲೆ ಅವರು ಕೋರ್ಟ್‌ಗೆ ಹೋಗಿ ಜಾಮೀನು ಮೇಲೆ ಬಿಡಿಸಿಕೊಂಡು ಬರಬೇಕಾಗುತ್ತದೆ. ಅದನ್ನು ಮಾಡಿದ್ದಾರೆಯೇ? ಆಮೇಲೆ ಅಕಸ್ಮಾತ್ ಅವರಿಗೆ ಗೊತ್ತಿದ್ದು ಗೊತ್ತಿದ್ದು ಅವರು ಹುಲಿಯನ್ನು ಕೊಲ್ಲುವ ಮನಸ್ಸು ಇಲ್ಲದೆ ಅದು ಸತ್ತಿದ್ದರೂ ಅಥವಾ ಪ್ರಯೋಗ ಮಾಡಲು ಹೋದಾಗ ಹುಲಿ ಸತ್ತಿದ್ದರೂ ಸಹ ಅದು ಅಪರಾಧವಾಗುತ್ತದೆ. ಅವರ ಮೇಲೆ ಕೇಸ್ ಹಾಕಿ ಅವರು ಜಾಮೀನು ಮೇಲೆ ಬಿಡಿಸಿಕೊಂಡು ಬರಬೇಕಾಗುತ್ತದೆ. ಆದರೆ ಇದರಲ್ಲಿ ತಾವು ಯಾವ ರೀತಿ ನಡೆದುಕೊಂಡಿದ್ದೀರಿ? ಕಾನೂನು ಪ್ರಕಾರ ಅವರ ಮೇಲೆ ಕೇಸ್ ದಾಖಲು ಮಾಡಬೇಕು ಆಮೇಲೆ ಅವರು ಜಾಮೀನು ಕೊಟ್ಟು ಹೊರಬರಬೇಕು. ತನಿಖೆ ಮಾಡಿ ಆದರಲ್ಲಿ ಪ್ರೈಮಾ ಫೇಸಿಕೇಸ್ ಇದೆಯೋ ಇಲ್ಲವೋ ಎನ್ನುವುದು ಆಮೇಲೆ ತಾನೆ ಪ್ರೂವ್ ಆಗುವುದು. ಒಂದು ವೇಳೆ ಅವರು ಹುಲಿಗೆ ಎಲೆಕ್ಟ್ರಿಕ್ ಪಟ್ಟಿ ಕಟ್ಟಿದ್ದು ಆಗ ಹುಲಿ ಸತ್ತಿದ್ದರೆ ಅದು ತನಿಖೆಯಿಂದ ನಿಜವಾಗುತ್ತದೆ. ಅದು ಏನೇ ಇರಲಿ ಅವರನ್ನು ಹೊರಗೆ ಬಂಧಿಸಿ ಆಮೇಲೆ ಜಾಮೀನಿನ ಮೇಲೆ ಬಿಡುಗಡೆ ಮಾಡುವಂತಹ ಕೆಲಸವನ್ನು ಇಲಾಖೆಯವರು ಮಾಡಿದ್ದಾರೆಯೇ ಹೇಗೆ ?

೧೨-೪೦ ಪಿ. ಎಂ.

ಇನ್ನು ಮುಂದೆ ನಮ್ಮ ಸರ್ಕಾರದವರು ಇಂಥಾ ದೊಡ್ಡವರ ಹವ್ಯಾಸಗಳಿಗೆ ಪ್ರೋತ್ಸಾಹ ಕೊಡುವ ಪ್ರವೃತ್ತಿಯನ್ನು ಇಟ್ಟುಕೊಳ್ಳುವಾರದು. ಇನ್ನು ಮುಂದೆ ಇಂಥಾದ್ದಕ್ಕೆಲ್ಲಾ ಅವಕಾಶ ಕೊಡುವುದಿಲ್ಲವೆಂದು ನಾನು ಭರವಸೆ ಇಟ್ಟುಕೊಂಡಿದ್ದೇನೆ. ಸಂಶೋಧನೆ ಮಾಡುವುದರಿಂದ ಹುಲಿಗಳನ್ನು ನರಿಗಳಾಗಿ ಮಾಡುವುದಕ್ಕಾಗುತ್ತದೆಯೇ? ಕಾರಂತರು ಹುಲಿಗಳನ್ನು ನರಿಗಳಾಗಿ ಮಾಡುತ್ತಾರೆಂದಾದರೆ ಪ್ರಯೋಗವನ್ನು ನಡೆಸಲಿ. ಹುಲಿಗಳನ್ನು ಹೊಲ ಉಳುವುದಕ್ಕೆ ಅನುಕೂಲ ವಾಗುವ ಹಾಗೆ ಮಾಡಲಾಗುತ್ತದೆಯೇ? ಹುಲಿಗಳನ್ನು ಅದರಷ್ಟಕ್ಕೆ ಬಿಟ್ಟರೆ ಅವುಗಳು ಕಾಡಿನಲ್ಲಿ ಸುಂದರವಾಗಿ ಇರುತ್ತವೆ. ಬೇಕಾದರೆ ಮಾನ್ಯ ಫೋರ್ಪಡೆಮವರು ಹುಲಿಗಳ ಫೋಟೋಗಳನ್ನು ಹಿಡಿದಕೊಂಡು ಬರುತ್ತಾರೆ. ಅದನ್ನು ನಾವು ನೋಡಬಹುದು. ಹುಲಿಯನ್ನು ಯಾವತ್ತೂ

ಎತ್ತುಗಳನ್ನಾಗಿ ಮಾಡುವುದಕ್ಕಾಗುವುದಿಲ್ಲ. ಈ ರೀತಿಯ ಪ್ರಯೋಗ ಮಾಡುವುದನ್ನು ಇನ್ನು ಮುಂದೆ ಬಂದ್ ಮಾಡಲಿ. ಅವರ ಮೇಲೆ ಕೇಸ್ ದಾಖಲು ಮಾಡಿ ಅರೆಸ್ಟ್ ಮಾಡುವುದಕ್ಕೆ ಈ ಸರ್ಕಾರ ಮನಸ್ಸು ಮಾಡುತ್ತದೆಯೇ ಎಂದು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ — ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯಗಳ ಬಗ್ಗೆ ನನ್ನದೂ ಏನು ವ್ಯತ್ಯಾಸದ ಅಭಿಪ್ರಾಯ ಇಲ್ಲ. ಅವರೇ ಹುಲಿಗಳ ಸಾವಿಗೆ ಕಾರಣರೆಂದು ತನಿಖೆಯಿಂದ ಗೊತ್ತಾದರೆ ಅವರಿಗೆ ನೋಟೀಸ್ ಕೊಟ್ಟು ಅವರ ಮೇಲೆ ಕಾನೂನಿನ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎನ್. ನಾಯಕ್ — ಪ್ರಾಬ್ಲಮ್ ಇರುವುದೇ ಇಲ್ಲಿ. ಇಲ್ಲಿ ಏನಾಗಿದೆ ಮಾನ್ಯ ಅಧ್ಯಕ್ಷರೇ, ದೊಡ್ಡವರಿಗೆ ಮತ್ತು ಬಡವರಿಗೆ ವ್ಯತ್ಯಾಸ ಇರುವುದು ಇಲ್ಲಿ ಕಂಡುಬರುತ್ತದೆ. ಈ ಕಾರಂತರು ಸ್ವಲ್ಪ ವಿಜ್ಞಾನಿಗಳು ಎಂದು ಬೇಳಿದ್ದಾರೆ. ನಾನು ಅವರನ್ನು ಲೇಖಕ ಎಂದು ತಿಳಿದುಕೊಂಡಿದ್ದೆ. ಅವರು ವಿಜ್ಞಾನಿಗಳಾಗಿದ್ದಾರೆಂದು ನನಗೆ ಗೊತ್ತಿರಲಿಲ್ಲ. ಅವರಿಗೆ ದೊಡ್ಡ ಡೆಕೋರಂ ಇದೆ. ಒಬ್ಬ ಸಾಮಾನ್ಯ ವ್ಯಕ್ತಿ ಹುಲಿಯನ್ನು ಹೊಡೆದಿದ್ದರೆ ಇಷ್ಟು ಜೊತ್ತಿಗೆ ಅವನು ಜೈಲಿನಲ್ಲಿ ಇರುತ್ತಿದ್ದ. ಒಬ್ಬ ಸಾಮಾನ್ಯ ಮನುಷ್ಯ ಕಾಡಿನಲ್ಲಿ ಬಂದು ಹಾವನ್ನು ಹೊಡೆದರೂ ಜೈಲಿಗೆ ಹಾಕುತ್ತೀರಿ. ಆದ್ದರಿಂದ ಕೂಡಲೇ ಈ ಕಾರಂತರನ್ನು ಅರೆಸ್ಟ್ ಮಾಡಿ ಜಾಮೀನಿನ ಮೇಲೆ ಬೇಕಾದರೆ ಆಮೇಲೆ ಬಿಡುಗಡೆ ಮಾಡಿ.

ಶ್ರೀ ಡಿ. ಎ. ಚಿನ್ನಪ್ಪ.— ಮಾನ್ಯ ಅಧ್ಯಕ್ಷರೇ ಈ ಕಾರಂತರು ಹುಲಿಗಳ ಸಂತತಿಯನ್ನು ನಾಶ ಮಾಡುವುದಕ್ಕೆ ಪ್ರಯೋಗ ಮಾಡುತ್ತಿದ್ದಾರೋ ಅಥವಾ ಹುಲಿಗಳ ಸಂತತಿಯನ್ನು ಬೆಳೆಸುವುದಕ್ಕೆ ಪ್ರಯೋಗ ಮಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ. ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಕಾರಂತರ ಪ್ರಯೋಗದಿಂದ ಒಂದು ಹುಲಿ ಮಾತ್ರ ಸತ್ತಿದೆ ಎಂದು ಹೇಳಿದ್ದಾರೆ. ಆದರೆ, ಅವರಿಗೆ ೨ ಲಕ್ಷದ ೪೦ ಸಾವಿರ ರೂಪಾಯಿಗಳನ್ನು ಫೈನ್ ಹಾಕಿದ್ದೇವೆಂದು ಸಹ ಮಂತ್ರಿಗಳ ಉತ್ತರದಲ್ಲಿ ಹೇಳಿದ್ದಾರೆ. ಅಂದರೆ ೫ ಹುಲಿಗಳನ್ನು ಅವರೇ ಕೊಂದಿರಬೇಕು. ಈ ತಾರೀಖಿನೊಳಗೆ ಇಷ್ಟು ಹುಲಿಗಳು ಸಾಯಬೇಕಾದರೆ ಕಾರಣ ಏನು. ಹಿಂದೆ ಯಾವ ಕಾರಣಕ್ಕೂ ಹುಲಿಗಳು ಸತ್ತಿರಲಿಲ್ಲ. ದಿನಾಂಕ ೬-೩-೯೦ರಿಂದ ದಿನಾಂಕ ೪-೫-೯೦ರವರೆಗೆ ೫ ಹುಲಿಗಳು ಸಾಯುವುದಕ್ಕೆ ಕಾರಣ ಏನು ಎಂದು ನಾವು ಕೇಳಬೇಕಾಗುತ್ತದೆ. ಈ ರೀತಿ ಟೈಗರ್ ಪ್ರಾಜೆಕ್ಟ್ ಸಂಶೋಧನೆಗಳು ಬೇಕಾಗಿರುವುದಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕು. ಹಾಗೂ ಈ ಹುಲಿಗಳನ್ನು ಕೊಲ್ಲುವುದಕ್ಕೆ ಕಾರಣರಾಗಿರುವ ಆ ಅಪರಾಧಿಯನ್ನು ಅರೆಸ್ಟ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ನಾಯಕ್‌ರವರು ಹಾಗೂ ಮಾನ್ಯ ಚಿನ್ನಪ್ಪನವರು ಹೇಳಿದ ವಿಷಯ ನನ್ನ ಗಮನಕ್ಕೆ ಬಂದಿದೆ. ಈ ಸಂಶೋಧನೆ ಮಾಡುವುದು ನಿರರ್ಥಕ. ಇದರ ಗುರಿ ಏನೆಂದು ನನಗೂ ಗೊತ್ತಾಗಲಿಲ್ಲ ಅಮೆರಿಕಾದ ಸಂಸ್ಥೆಯವರು ಈ ಒಂದು ಸಂಶೋಧನೆ ಮಾಡುವುದಕ್ಕೆ ಹಣ ಕೊಡುತ್ತಾರೆ ಎನ್ನುವ ಹಿನ್ನೆಲೆಯಲ್ಲಿ ಈ ಸಂಶೋಧನೆಗೆ ಇಲ್ಲಿ ಅವಕಾಶ ಕೊಟ್ಟಿರುವುದು. ಈಗ ೫ ವರ್ಷ ಆಯಿತು. ಈ ೫ ವರ್ಷದಿಂದ ಏನು ಸಂಶೋಧನೆ ಮಾಡಿದ್ದಾರೆಂದು ನನಗೆ ತಿಳಿದಿಲ್ಲ. ಸಂಶೋಧನೆ ಮಾಡುವುದರಲ್ಲಿ ಹುಲಿಗಳು ಸತ್ತು ಹೋಗಿವೆ. ಹಿಂದಿನ ಸರ್ಕಾರದವರು ಯಾರಿಗೋ ಪ್ರೋತ್ಸಾಹ ಮಾಡಬೇಕಾಗಿದ್ದು, ಅದನ್ನು ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ಅದಂ ತಪ್ಪೋ ನೆಪ್ಪೋ ಮಾಡಿದ್ದಾರೆ ಈಗ ಇದನ್ನು ಕೊನೆ ಮಾಡಿದ್ದೇವೆ. ಇವತ್ತು ಅದಿಲ್ಲ. ಇನ್ನು ಅವರು ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಹೇಳಿಕೆ ಕೊಡುತ್ತಾ ಸಂದರ್ಭದಲ್ಲಿ ೧೯೮೫ನೇ ಜನವರಿ ೩೦ರಂದು ಇದ್ದಂತಹ ಸರ್ಕಾರ ಸಂಶೋಧನೆಗೆ ಆಜ್ಞೆಯನ್ನು ಕೊಟ್ಟಂತಹ ಸಂದರ್ಭದಲ್ಲಿ ಏನೋ ಕೆಲವರ ಹವ್ಯಾಸಕ್ಕೆ ಪುರಸ್ಕಾರ ಕೊಡಬೇಕೆನ್ನುವ ದೃಷ್ಟಿಯಿಂದ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಜೊತೆಗೆ ನಮ್ಮ ಸದನದ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಈ ರಾಜ್ಯಕ್ಕೆ ಸ್ವಾತಂತ್ರ್ಯ ದೊರೆಯತಕ್ಕ ಒಬ್ಬ ಸಾಮಂತರಾಜರ ಮಗನ ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಾನು ಅವರನ್ನು ಡಿಫೆಂಡ್ ಮಾಡುವುದಕ್ಕೆ ಹೋಗುವುದಿಲ್ಲ. ಆಗಿರತಕ್ಕ ಘಟನೆಯ ಬಗ್ಗೆ ನನಗೆ ಕಲಿಯಲಿದೆ. ಇದನ್ನು ಸರಿಪಡಿಸಬೇಕು. ಆದರೆ ಇದನ್ನು ಉಪಯೋಗಿಸಿಕೊಂಡು ಯಾರೋ ಒಬ್ಬ ಸಾಮಂತರಾಜರ ಬಗ್ಗೆ ಕೆಲವು ಅಭಿಪ್ರಾಯ ಬರತಕ್ಕ ರೀತಿಯಲ್ಲಿ ಪ್ರಸ್ತಾಪಿಸತಕ್ಕದ್ದು ಉಚಿತವಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್. ಎನ್. ನಾಯ್ಕ್ — ಮಾನ್ಯ ಅಧ್ಯಕ್ಷರೆ, ಆ ಸಾಹಿತಿಗಳ ಬಗ್ಗೆ ನನಗೆ ಅಪಾರ ಗೌರವವಿದೆ. ನಾನು ಅವರ ಹಲವಾರು ಪುಸ್ತಕಗಳನ್ನು ಓದಿದ್ದೇನೆ. ಕೇವಲ ಪ್ರಚಾರಕ್ಕಾಗಿ ಈ ರೀತಿ ಮಾತನಾಡುತ್ತಿದ್ದಾರೆ. ಅವರ ಬಗ್ಗೆ ನಾನು ಮಾತನಾಡಿರುವುದನ್ನು ಕಡತದಿಂದ ಪರಿಶೀಲಿಸಿ ನೋಡ ಬೇಕು. ಆ ಸಾಹಿತಿಗಳ ಬಗ್ಗೆ ನಾನು ಅಗೌರವದಿಂದ ನಡೆದುಕೊಂಡಿಲ್ಲ. ಇದು ಸರಿಯಲ್ಲ. ಮಾನ್ಯ ಸಿದ್ಧಯ್ಯರವರು ನನ್ನ ಬಗ್ಗೆ ಹೇಳಿರುವುದು ಕಡತದಿಂದ ಹೋಗಬೇಕು. ಮಾನ್ಯ ಶಿವರಾಂ ಕಾರಂತರವರು ತಿಳಿವಳಿಕೆ ಬಗ್ಗೆ, ಅವರ ಸಾಹಿತ್ಯದಲ್ಲಿ ಅವರಿಗಿರುವ ಅಭಿಮಾನದ ಬಗ್ಗೆ, ಜ್ಞಾನದ ಬಗ್ಗೆ ನನಗೆ ಅಪಾರ ವಾದ ಗೌರವವಿದೆ. ಅದರ ಬಗ್ಗೆ ಬೇರೆ ಪ್ರಶ್ನೆಯೇ ಇಲ್ಲ. ಇದನ್ನು ಅವರು ಈ ರೀತಿ ತಿರುಚಿ ಈ ರೀತಿ ಬಳಸಬಾರದು. ಇದು ಸರಿಯಲ್ಲ.

ಅಧ್ಯಕ್ಷರು. — ಡಾ. ಶಿವರಾಂ ಕಾರಂತರ ಪ್ರಶ್ನೆ ಈ ಸದನದಲ್ಲಿ ಬರುವುದಕ್ಕೆ ಅವಕಾಶವೇ ಇಲ್ಲ.

ಶ್ರೀ ಆರ್. ಎನ್. ನಾಯಕ್ — ಅವರು ಏತಕ್ಕೆ ಅದನ್ನು ಹೇಳಬೇಕು? ನಿಮ್ಮ ನಿಮ್ಮ ಪ್ರಚಾರಕ್ಕಾಗಿ ನೀವು ಹಿಂದೆ ಏನೇನೊ ಮಾಡಿದ್ದಿರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಇದರಲ್ಲಿ ಮುಖ್ಯವಾಗಿ ಗಮನಿಸತಕ್ಕದ್ದು, ಒಂದು ಪಕ್ಷ ಸರ್ಕಾರ ಯಾವುದಾದರೂ ಹವ್ಯಾಸವನ್ನು ಮಾಡತಕ್ಕ ಜನಗಳಿಗೆ ಪುರಸ್ಕಾರ ಕೊಡುವಂತಹ ಉದ್ದೇಶದಿಂದಲೆ ಮಾಡಿದ್ದರೆ ೧೯೮೫ರಿಂದ ೯೦ರವರೆಗೆ ೬ ವರ್ಷಗಳಲ್ಲಿ ಯಾವ ಹುಲಿಯೂ ಸಹಿತ ಸತ್ತಿರಲಿಲ್ಲ. ಈಗ ಇಲ್ಲಿ ಪ್ರಶ್ನೆ ಏನಿದೆ...

ಅಧ್ಯಕ್ಷರು. — ಬಸವಲಿಂಗಪ್ಪನವರು ಬಂದ ಮೇಲೆ ಹುಲಿಗಳು ಸಾಯುವುದು ಶುರುವಾಯಿತಾ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಹೌದು. ಹೌದು ಸುಲಭವಾಗಿ ಅವರು ನಾಲ್ಕು ಲೈನಿನ ಉತ್ತರವನ್ನು ಕೊಟ್ಟು, ನಮಗಲ್ಲಾ ಸಮಾಧಾನ ಮಾಡುವುದಕ್ಕಾಗುವುದಿಲ್ಲ. ಯಾರ ಮೇಲೂ ಅಂದರೆ ಹಿಂದಿನ ಸರ್ಕಾರ ಮಾಡಿದ್ದು ನಾನು ಏನೋ ಒಂದು ದೊಡ್ಡ ಕೆಲಸ ಮಾಡಿದ್ದೇನೆ. ಸಂಶೋಧನೆ ಯನ್ನು ರದ್ದು ಮಾಡಿದ್ದೇನೆ ಎಂದು ಹೇಳಿದರೆ ನಾವು ಒಪ್ಪುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಬಸವಲಿಂಗಪ್ಪನವರು ಅದನ್ನು ಹೇಳಲಿಲ್ಲ. ಅವರು ಕಾಂಪ್ರಹೆನ್ಸಿವ್ ಸ್ಟೇಟ್ ಮೆಂಟ್ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ಅದರ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ೬-೩-೯೦ ರಿಂದ ೪-೫-೯೦ರ ಮಧ್ಯದಲ್ಲಿ ಈ ಹುಲಿಗಳು ಸತ್ತಿವೆ. ಅದಕ್ಕೆ ಏನು ಸಂಬಂಧವಿದೆ ಎಂದು ನನಗೆ ಅರ್ಥವಾಗುತ್ತಿಲ್ಲ ಎಂದೆರಡು ತಿಂಗಳಲ್ಲಿ ಮಾತ್ರ ಏಕೆ ಇಷ್ಟು ಹುಲಿಗಳು ಸತ್ತಿವೆ. ಇದರ ಬಗ್ಗೆ ಸಮರ್ಥ ತಜ್ಞರಿಂದ ವಿಚಾರಣೆ ಮಾಡಿಸುತ್ತೇವೆಂದು ಹೇಳಿದ್ದೀರಿ ? ಆ ತಜ್ಞರು ಅಂದರೆ ಯಾರು ಎಂಬುದು ನಮಗೆ ಗೊತ್ತಾಗಬೇಕು. ಎರಡನೆಯದಾಗಿ ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಐದು ಹುಲಿಗಳಲ್ಲ, ೯ ಹುಲಿಗಳು ಸತ್ತಿದೆ ಎಂದು. ನಮಗೆ ಕೆಲವು ಜವಾಬ್ದಾರಿ ವ್ಯಕ್ತಿಗಳು ಈ ವಿಷಯ ವನ್ನು ತಿಳಿಸಿದ್ದಾರೆ ಇದರ ಬಗ್ಗೆಯೂ ಸಹ ಸರ್ಕಾರ ವಿಚಾರಣೆ ಮಾಡಬೇಕು. ಸಂಶೋಧನೆ ಮಾಡಲಿಕ್ಕೆ ಒಂದು ಸ್ಪೆಸಿಫಿಕ್ ಏರಿಯವನ್ನು ನಾಗರಹೊಳೆಯಲ್ಲಿ ಕೊಟ್ಟಿದ್ದಾರೆ. ಅವರ ಏರಿಯಾದಲ್ಲಿ ಈ ಹುಲಿಗಳು ಸತ್ತಿಲ್ಲ, ಅವರ ಏರಿಯಾ ಹೊರಗಡೆ ಹುಲಿಗಳು ಸತ್ತಿವೆ, ಇದು ಸರ್ಕಾರದ ಗಮನಕ್ಕೆ ಬಂದಿದೆಯಾ ? ಬಂದಿದ್ದರೆ ಇದನ್ನೂ ಸಹಿತ ವಿಚಾರಣೆ ಮಾಡಿಸುತ್ತೀರಾ ? ಎಂಬುದನ್ನು ತಾವು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಾಗರಹೊಳೆ ಏರಿಯಾ ಬಹಳ ದೂರವಿದೆ. ಅಲ್ಲಿ ಪಕ್ಕಪಕ್ಕದಲ್ಲಿ ಕಾಡೇ ಇದೆ. ಸಂಶೋಧನೆ ಮಾಡತಕ್ಕವರು ಎಲ್ಲಾ ಕಡೆ ಹೋಗುತ್ತಾರೆ. ಅಲ್ಲಿ ಸ್ವತಂತ್ರವಾಗಿ ತಿರುಗಾಡುತ್ತಾರೆ. ಎಲ್ಲಿಗೆ ಬೇಕಾದರೂ ಹೋಗುತ್ತಾರೆ. ಅವರು ಯಾವ ಹುಲಿಯನ್ನಾದರೂ ಬೇಕಾದರೆ ಹಿಡಿಯಬಹುದು. ಒಂದು ವಿಚಾರವನ್ನು ಹೇಳುತ್ತೇವೆ, ತಾವು ಹೇಳಿದಹಾಗೆ ಯಾರ ಮಗ ಯಾರಿದ್ದಾರೆಂಬುದು ಅಲ್ಲ. ಅದೇ ರೀತಿ ಹಿಂದಿನ ಸರ್ಕಾರದಲ್ಲಿ ಯಾವರೀತಿ ಏನಾಯಿತೆಂಬುದಕ್ಕೆ ನಾನು ಹೋಗುವುದಿಲ್ಲ. ನಮ್ಮ ಪೆಸರಾಘಟ್ಟದಲ್ಲಿ ಕಾಣೆಯಾಗುವವರಿಗೆಲ್ಲಾ ಒಂದು ಜಮೀನು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.— ಇವರು ಏನು ಮಾತನಾಡುತ್ತಿದ್ದಾರೆ, ಕಾಣೆಯಾಗುವವರಿಗೆಲ್ಲ ಜಮೀನು ಕೊಟ್ಟಿದ್ದಾರೆಂದರೆ ಏನು ಅರ್ಥ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅವರು ಹಿರಿಯ ಸದಸ್ಯರಿದ್ದಾರೆ, ಮಂತ್ರಿಗಳಾಗಿದ್ದಾರೆ. ಅವರು ಜವಾಬ್ದಾರಿಯಿಂದ ಮಾತಾಡಬೇಕು. ಹಾಗಾದರೆ ನಿಮ್ಮದನ್ನೆಲ್ಲಾ ನಾನು ಹೇಳಲೇ ? ಯಾರ್ಯಾರಿಗೆ ನಿಮ್ಮ ಸರ್ಕಾರದವರು ಜಮೀನು ಕೊಟ್ಟಿದ್ದಾರೆ ಎಂದು. ನಾನು ಹೇಳಲೇ? ಯಾರು ಹುಲಿಗಳನ್ನು ಕೊಂದಿರುವವರೋ ಅವರಿಗೆ ಶಿಕ್ಷೆಯಾಗಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಕಾಣಿಯುವವರಿಗೆ ನರ್ತನ ಮಾಡುವವರಿಗೆ, ಡೋಲು ಬಾರಿಸುವವರಿಗೆ ಹೆಗಡೆ ಅವರ ಕಾಲದಲ್ಲಿ ಭೂಮಿ ಕೊಟ್ಟಿರುವುದು ನಿಜ. ಅದು ನೂರಕ್ಕೆ ನೂರ ಸತ್ಯ, ಅದರಲ್ಲಿ ಬೇರೆ ಮಾತೇ ಇಲ್ಲ. ಕಾಣಿಯುವವರ ನರ್ತನ ನೋಡುವುದಕ್ಕೆ ಪ್ರಧಾನಮಂತ್ರಿಗಳೇ ಬಂದಿದ್ದರು. ಈ ರಾಜ್ಯದ ಸೆಲವನ್ನು ಬೇರೆ ಯಾರಿಗೋ ದಾನವಾಗಿ ಕೊಟ್ಟಿದ್ದಾರೆ. ಅದನ್ನು ಹೇಳಬೇಕೋ ಬೇಡವೋ ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮಾನ್ಯ ಸಚಿವರು, ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಕಾಣಿಯುವವರಿಗೆ ಜಮೀನು ಕೊಟ್ಟಿದ್ದಾರೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಪ್ರೋತಿಮಾ ಬೇಡಿ ಯಾರು ?

(ಗೊಂದಲ)

ಅಧ್ಯಕ್ಷರು.—ಇಲ್ಲಿ ಪ್ರಶ್ನೆ ಇರುವುದು ಅಭಯಾರಣ್ಯದಲ್ಲಿ ಹುಲಿಗಳನ್ನು ಕೊಂದಿರುವುವರ ಬಗ್ಗೆ. ಅದು ಹುಲಿಗಳಿಂದ ಕಾಣಿಯುವುದು. ಡೋಲು ಬಾರಿಸುವುದು ಇದಕ್ಕೆಲ್ಲಾ ಹೋಗುತ್ತಿದೆ. ನಾನು ಮಾನ್ಯ ಸಚಿವರಿಗೆ ಮತ್ತು ಸದಸ್ಯರಿಗೆ ಇಷ್ಟೇ ಹೇಳುವುದು, ತಮ್ಮ ಪ್ರಶ್ನೆ ಮತ್ತು ಉತ್ತರ ಹಾಗೂ ಸೃಷ್ಟೀಕರಣ ವಿಷಯಕ್ಕೆ ಮಾತ್ರ ಸೀಮಿತ ಮಾಡಿಕೊಂಡರೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಹುಲಿ ಬಗ್ಗೆ ಹೇಳಲು ನನಗೆ ಅವಕಾಶ ಬೇಕು. ಆಗಲೇ ತಮಗೆ ಹೇಳಿದಂತೆ ನನ್ನ ಸ್ನೇಹಿತರು ನಾನು ಈ ನೋಟೀಸ್ ಕೊಡುವುದರೊಳಗೆ ಅವರೇ ಸಹಿ ಹಾಕಿ ಕೊಟ್ಟಿದ್ದಾರೆ. ದಯವಿಟ್ಟು ನನಗೂ ಅವಕಾಶ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಸಚಿವರು ಆಸಂಬದ್ಧ ಹೇಳಿಕೆ ಕೊಟ್ಟಿದ್ದಾರೆ. ಹೆಗಡೆಯವರ ಕಾಲದಲ್ಲಿ ಕಾಣಿಯುವವರಿಗೆಲ್ಲ ಜಾಗ ಕೊಟ್ಟರು ಎಂದು ಹೇಳಿದರು. ನಿಮ್ಮ ಮುಖ್ಯಮಂತ್ರಿಗಳು ಸೋಮವಾರ ಪೇಟೆಗೆ ಕಾಣಿಯುವವರನ್ನೆಲ್ಲಾ ಕರೆದುಕೊಂಡುಹೋಗಿ ಅವರ ಜೊತೆಯಲ್ಲಿ ಕಾಣಿಯುತ್ತಿದ್ದರು. ಇದಕ್ಕೆ ಏನು ಹೇಳುತ್ತೀರಿ ? ಅವರೂ ಕಾಣಿಯುತ್ತಿದ್ದರು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಗೋಪಿನಾಥ ದಾಸರು ಒಬ್ಬ ಪ್ರಸಿದ್ಧ ಕಲಾವಿದರು. ಅವರು ಹೇಳಿಕೆ ಕೊಟ್ಟಿದ್ದಾರೆ, ನವಗೆ ಕೊಡದೆ ಬೇರೆಯವರಿಗೆ ಕೊಟ್ಟಿದ್ದಾರೆ ಎಂದು. ಅದು ಪತ್ರಿಕೆಯಲ್ಲಿ ಸಮಗ್ರವಾಗಿ ಬಂದಿದೆ ನಮ್ಮ ನಾಡಿನ ಕಲಾವಿದರನ್ನು ಕೊಲೆ ಮಾಡಿದೆ, ಅನ್ಯಾಯ ಮಾಡಿದೆ ಎಂದು ಪತ್ರಿಕೆಯಲ್ಲೇ ಬಂದಿದೆ.

(ಗೊಂದಲ)

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಸಿಧ್ಯಕ್ಕರೇ, ಮಾನ್ಯ ಸಿಂಧ್ಯಾ ಅವರು ಹೇಳತಕ್ಕಂಥ ಮಾತು ಅಸಂಬದ್ಧವಲ್ಲ, ಕೊಟ್ಟಿದ್ದು ನಿಜ. ನೀವು ಏತಕ್ಕೆ ಕಾಣಿಯುತ್ತೀರಿ. ಕಾಣಿಯುವವರಿಗೆ ಜಮೀನು ಕೊಟ್ಟರೆ ನೀವು ಏತಕ್ಕೆ ಕಾಣಿಯುತ್ತೀರಿ ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ಕಾಣಿಯುತ್ತಿರುವುದು ನೀವು ನಿಮ್ಮ ಮುಖ್ಯ ಮಂತ್ರಿಗಳೇ ಕಾಣಿದಿದ್ದು. ನಾನೇಕೆ ಕಾಣಿಯಲಿ. ನೀವು ಕಾಣಿಯುತ್ತಿರುವುದು.

ಇವರು ಮುಖ್ಯ ವಿಷಯವನ್ನೇ ಬಿಟ್ಟುಬಿಟ್ಟರು. ಯಾವ ರೀತಿ ವಿಚಾರಣೆಯನ್ನು ಮಾಡುತ್ತೀರಿ? ಏನು ಶಿಕ್ಷೆಯನ್ನು ತಪ್ಪು ಮಾಡಿದವರಿಗೆ ಕೊಡುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಿ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮಂತ್ರಿಗಳು).— ಈ ಅರಣ್ಯದಲ್ಲಿ ಪ್ರಾಣಿಗಳು ಮತ್ತು ವನ್ಯ ಮೃಗಗಳು ಏನಿವೆ ಅದರಲ್ಲಿ ತಜ್ಞರು ಯಾರು ಇದ್ದಾರೆ, ಅವರನ್ನು ಹೊಡಕೆ ನೇಮಕ ಮಾಡಿ ತನಿಖೆಯನ್ನು ಮಾಡಿಸುತ್ತೇನೆ.

ಶ್ರೀ ಪಾಟೀಲ್ ನಾಗರಾಜ್.— ಮಾನ್ಯ ಅರಣ್ಯ ಸಚಿವರ ಇತಿಹಾಸವೇ ಯಾವಾಗಲೂ ಬರಿಗೊಂದಲ ಆದರೂ ಒಂದು ಮಾತನ್ನು ನಾನು ಅವರ ಗಮನಕ್ಕೆ ತರುತ್ತೇನೆ. ಈ ಹುಲಿಗಳು ಕೊಳೆತು ನಾರಿದ ಮೇಲೆ ವೈದ್ಯಕೀಯ ಪರೀಕ್ಷೆ ನಡೆದಿದೆ ಎಂದು ಅವರ ಹೇಳಿಕೆಯಲ್ಲಿ ತಿಳಿದು ಬಂದಿದೆ. ಕೊಳೆತು ನಾರಿದಮೇಲೆ ವೈದ್ಯಕೀಯ ಪರೀಕ್ಷೆ ನಡೆದಿದ್ದರೆ ಎಷ್ಟರಮಟ್ಟಿಗೆ ಅದರ ವರದಿ ಬಂದಿರಬಹುದು ಎನ್ನ ತಕ್ಕಂಥದ್ದು ಬಹಳ ಪರಿಣಾಮಕಾರಿಯಾಗಿರತಕ್ಕಂಥದ್ದು ವನ್ಯ ಮೃಗಗಳು ರಕ್ಷಣೆಗಾಗಿ ವಿಶೇಷ ವಾದಂಥ ಕಾಯ್ದೆ ಇದೆ. ಆ ವಿಶೇಷ ಕಾಯ್ದೆ ಪ್ರಕಾರ ವನ್ಯ ಮೃಗಗಳಿಗೆ ಯಾವುದೇ ರೀತಿಯಲ್ಲಿಯಾಗಲೂ ಸಣ್ಣ ತೊಂದರೆಯೂ ಕೂಡಾ ಆಗಬಾರದು. ಸಾಯಂಕಾಲ ಆರು ಗಂಟೆಯ ಮೇಲೆ ಅರಣ್ಯಗಳಿಗೆ ಒಬ್ಬರನ್ನು ಬಿಡಬಾರದು ಎಂದು ಕಟ್ಟುನಿಟ್ಟಾದ ನಿಯಮ ಇದೆ. ಇಷ್ಟೆಲ್ಲಾ ಇದ್ದಾಗಲೂ ಈ ಕಾಯ್ದೆಯನ್ನು ಯಾರಿ ಸಂಶೋಧಕರು ಈ ಸಂಶೋಧನೆಗಳನ್ನು ಒಳಗಡೆ ಬಿಡುವುದಕ್ಕೆ ಅನುಮತಿ ಕೊಟ್ಟರೆ ತಕ್ಕಂಥದ್ದು ಸರಿಯೇ ? ಈ ರೀತಿ ಸಂಶೋಧನೆಯನ್ನು ನಡೆಸುವುದಕ್ಕೆ ಮಾಡಿರಂವುದು ಸರಿಯೇ ? ಕಾಯ್ದೆಯನ್ನು ತಿದ್ದುಪಡಿ ಮಾಡಿದರೇ ? ವನ್ಯ ಮೃಗಗಳ ಕಾಯ್ದೆ ಇದೆ. ಕಾಯ್ದೆ ಪ್ರಕಾರ ಒಳಗಡೆ ಯಾರನ್ನೂ ಬಿಡಬಾರದು ರಾತ್ರಿ ವೇಳೆಯಲ್ಲಿ ಎಂದು ಇದೆ. ಮತ್ತು ಹಗಲು ವೇಳೆಯಂತೂ ಇಲ್ಲವೇ ಇಲ್ಲ. ಇಷ್ಟೆಲ್ಲಾ ಕಟ್ಟುನಿಟ್ಟಾದ ಕಾಯ್ದೆ ಇರುವಾಗ ಈ ಸಂಶೋಧನೆಗೆ ಸುಮಾರು ಐದು ವರ್ಷಗಳಿಂದ ಈ ರೀತಿ ಅಸ್ಪದವನ್ನು ಕೊಟ್ಟಿರತಕ್ಕಂಥ ಪರಿಸ್ಥಿತಿ ಏನು ? ಇದರ ಹಿನ್ನೆಲೆ ಏನು ? ಇಷ್ಟೆಲ್ಲಾ ಕಾಯ್ದೆಯನ್ನು ಏನಾದರೂ ಬದಲಾವಣೆ ಮಾಡಿದ್ದೀರಾ ? ತಮಗೆ ಮತ್ತು ನನಗೆ ಗೊತ್ತಿರುವ ಮಟ್ಟಿಗೆ ಈ ಮನೆಯ ಅನೇಕ ಸದಸ್ಯರು ಇದರ ಬಗ್ಗೆ ತಮ್ಮ ಗಳ ಅನುಮಾನವನ್ನು ವ್ಯಕ್ತಪಡಿಸಿರುವುದು ನಿಜ. ಅಲ್ಲಿ ಸತ್ತಿರುವುದು ಐದು ಹುಲಿಗಳಲ್ಲ ನಿರಂತರವಾಗಿ ಹುಲಿಗಳು ಸಾಯುತ್ತಿವೆ. ನಿರಂತರವಾಗಿ ಅನೆಗಳು ಸಾಯುತ್ತಿರುವುದನ್ನು ತಾವೆಲ್ಲರೂ ಕೇಳಿದ್ದೀರಿ. ಜಿಂಕೆಗಳು ಕೂಡಾ ಸಾಯುತ್ತಿವೆ ಕಾಡು ಎಮ್ಮೆಗಳು ಕೂಡಾ ಸಾಯುತ್ತಿವೆ. ವನ್ಯಮೃಗಗಳಿಗೆ ಸರಿಯಾಗಿ ರಕ್ಷಣೆ ಸಿಗುತ್ತಿಲ್ಲ. ಅದಕ್ಕಾಗಿ ಈ ಕಾಯ್ದೆ ಇರುವುದು ಒಂದು ಕಡೆಯಾದರೆ ಮಾನ್ಯ ಸಚಿವರು ಹೇಳುವುದನ್ನು ನಾನು ಒಪ್ಪುತ್ತೇನೆ ಕೆಲವರು ಮೋಜಿಗೋಸ್ಕರ ಅರಣ್ಯವನ್ನು ಉಪಯೋಗಿಸಿಕೊಂಡಿರುವುದನ್ನು ನಾವು ನೋಡಿದ್ದೇವೆ. ಉಲ್ಲಾಸ ಕಾರಂತರಿಗೆ ಮತ್ತು ಶಿವರಾಮ ಕಾರಂತರಿಗೂ ಬಹಳ ಅಜಗಜಾಂತರ ವ್ಯತ್ಯಾಸ ಇದೆ. ಶಿವರಾಮ ಕಾರಂತರ ಬಗ್ಗೆ ಇಡೀ ಸಭೆ, ನಾಡು, ದೇಶದಲ್ಲಿ ಅವರಿಗೆ ಗೌರವ ಇದೆ. ಅವರ ಇತಿಹಾಸದ ಬಗ್ಗೆ ಚರ್ಚೆ ಬೇಕಾದರೆ ಅಮೇಲೆ ಮಾಡೋಣ ಅವರ ಬಗ್ಗೆ ಮಾತನಾಡುವುದಿಲ್ಲ ಆದರೆ ಈ ಕೆಲಸವನ್ನು ಅವರೆ ಹಾಗೆ ಮಾಡಿದ ಎಂದು ಹೇಳಿ ಅವರಿಗೆ ಕೆಟ್ಟ ಹೆಸರನ್ನು ತರಬೇಕು ಎಂದು ನಾವು ಯಾರೂ ಕೂಡಾ ಹೇಳುತ್ತಿಲ್ಲ. ಆದರೆ ಈ ಕೃತ್ಯವನ್ನು ಯಾರೇ-ಮಾಡಿರಲಿ ಇದಕ್ಕೆ ಐವತ್ತು ಸಾವಿರ ರೂಪಾಯಿ ಒಂದು ಹುಲಿಗೆ ಎಂದು ದಂಡ ಕಟ್ಟುವುದಕ್ಕಾಗುವುದಿಲ್ಲ. ಒಂದು ಹುಲಿಗೆ ಐವತ್ತು ಸಾವಿರ ರೂಪಾಯಿ ಬೆಲೆಯನ್ನು ಕಟ್ಟುವುದು ಅಲ್ಲ. ಇದು ಬೆಲೆಯನ್ನು ಕಟ್ಟಿದೇ ಇರತಕ್ಕಂಥ ಪ್ರಶ್ನೆ. ಹುಲಿಗಳ ಸಂತತಿ ನಾಶವಾಗುತ್ತಿದೆ. ಎರಡು ತಿಂಗಳಲ್ಲಿ ಐದು ಹುಲಿಗಳು ಸತ್ತಿವೆ. ಈ ರೀತಿ ಆದರೆ ಅವುಗಳ ಪರಿಸ್ಥಿತಿ ಏನು ? ತಾವು ಕರಾರುವಾಕ್ಕಾಗಿ, ಕಟ್ಟುನಿಟ್ಟಾಗಿ ಕಾಯ್ದೆಯನ್ನು ಬದಲಾವಣೆ ಮಾಡಿದ್ದೀರಾ ? ಐದು ವರ್ಷದಲ್ಲಿ ನಡೆದಿರತಕ್ಕಂಥ ಸಮಗ್ರವಾದಂಥ ಸಂಶೋಧನೆಯ ಬಗ್ಗೆ ತನಿಖೆಯನ್ನು ನಡೆಸುತ್ತೀರಾ ? ಇದರ ಬಗ್ಗೆ ಒಂದು ಸಂಶೋಧನೆಗೆ ಯಾರು ಮುಂದೆ ಬಂದಿದ್ದಾರೆ, ಅವರನ್ನು ಕೂಡಲೇ ದಸ್ತಗಿರಿ ಮಾಡುತ್ತೀರಾ ? ಎಂದು ಈ ಸಭೆಯ ಮುಂದೆ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಅಭಿಪ್ರಾಯಗಳಿಗೆ ನನ್ನ ಪೂರ್ಣ ಒಂಟು. ನನಗೇನೂ ವ್ಯತ್ಯಾಸ ಇಲ್ಲ ಹುಲಿಗಳ ಬಗ್ಗೆ ಸಂಶೋಧನೆ ಮಾಡಲಿಕ್ಕೆ ಅವರನ್ನು ಯಾರು ಪ್ರೋತ್ಸಾಹಿಸಿ ಮಾಡಿದರು ಅಥವಾ ಅವರೇ ಆಲ್ಲಿಗೆ ಬಂದರೆ ಎಂಬುದು ತನಿಖೆ ಆಗಬೇಕಾಗಿದೆ. ಇದು ಐದು ವರ್ಷಗಳಿಂದಲೂ ನಡೆಯುತ್ತಿದೆ ಎಂಬುದು ನನ್ನ ಕಿವಿಗೆ ಬಿದ್ದ ತಕ್ಷಣ ಅವರನ್ನು ವಜಾ ಮಾಡಿದ್ದೇನೆ ಮುಂದೆ ಇಂಥ ವಿಷಯಗಳಿಗೆ ನಾವು ಅವಕಾಶವನ್ನು ಕೊಡುವುದಿಲ್ಲ. ನಮ್ಮ ಕಾಡಿನಲ್ಲಿ ೨೧೧ ಹುಲಿಗಳು ಮಾತ್ರ ಇವೆ. ಅದರಲ್ಲಿ ಇಷ್ಟೇ ಹೋಗಿರುವುದು ಮುಂದಿನ ಸಂತತಿಯನ್ನು ನಿರ್ಮೂಲನೆ ಆಗತಕ್ಕಂಥ ಪ್ರಸಂಗವಲ್ಲಿ ಇಂಥ ಸಂಶೋಧನೆಗೆ ನಾವು ಇನ್ನು ಮೇಲೆ ಅವಕಾಶ ಕೊಡುವುದಿಲ್ಲ. ಇನ್ನು ಮೇಲೆ ಆ ಸಂತತಿ ಬೆಳೆಯುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಮಾಡುತ್ತೇವೆ ಎಂದು ಸ್ಪಷ್ಟವಾಗಿ ಮಾನ್ಯ ಸದಸ್ಯರಿಗೆ ನಾನು

ಹೇಳುತ್ತೇನೆ. ಇದರಿಂದ ಅವರು ತೃಪ್ತಿಯಾಗಬೇಕು ಎಂದು ಹೇಳುತ್ತೇನೆ. ಮತ್ತೆ ಬಂಡಿಗಳನ್ನು ಕೂಡಾ ಅರಣ್ಯಗಳಲ್ಲಿ ಒಡಾಡಲಿಕ್ಕೆ ನಾವು ಬಿಡುವುದಿಲ್ಲ.

ಶ್ರೀ ಪಾಟಾಳ್ ನಾಗರಾಜ್.— ತಾವು ವನ್ಯ ಮೃಗಗಳ ರಕ್ಷಣೆಯ ಬಗ್ಗೆ ಒಂದು ಕಟ್ಟುನಿಟ್ಟಾದ ನಿರ್ಧಾರಕ್ಕೆ ಬರಬೇಕು: ನೀವು ಕಾಯ್ದೆಯನ್ನು ಚದಲಾವಣೆ ಮಾಡುತ್ತೇನೆ ಎಂದು ಹೇಳಬೇಕು. ಇಲ್ಲದಿದ್ದರೆ ವನ್ಯ ಮೃಗಗಳನ್ನು ಸಂಪೂರ್ಣವಾಗಿ ನಾಶ ಮಾಡುತ್ತೀರಿ ಎಂದು ನಮಗೆ ಭಾವನೆ ಬರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.— ನಾನು ಬಂದು ಒಂದೂವರೆ ತಿಂಗಳಾಯಿತು.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.— ಹುಲಿಯನ್ನು ಕೊಂದವರು ಬಸವಲಿಂಗಪ್ಪನವರು ಎಂದು ನಾನು ಹೇಳುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.— ಕಾಯ್ದೆಯನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.— ಈ ಹುಲಿಗಳ ಬಗ್ಗೆ ತೆಗೆದುಕೊಂಡಿರತಕ್ಕಂಥ ನಿರ್ಧಾರ ಸರಿಯಿಲ್ಲ. ಆದ್ದರಿಂದ ನಾನು ಸಭಾತ್ಯಾಗ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.— ಸರ್ಕಾರದವರು ಈ ಬಗ್ಗೆ ಏನು ಒಂದು ಹೇಳಿಕೆ ಕೊಟ್ಟಿದ್ದಾರೆ....

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.—ಐದು ವರ್ಷದಿಂದ ಏನೇನು ನಡೆದಿದೆ ಎಂಬ ಬಗ್ಗೆ ತನಿಖೆ ಆಗಬೇಕು. ಮಂತ್ರಿಗಳ ಉತ್ತರದಿಂದ ನನಗೆ ಸಮಾಧಾನ ಆಗಿಲ್ಲ. ಆದ್ದರಿಂದ ನಾನು ಸಭಾ ತ್ಯಾಗ ಮಾಡುತ್ತೇನೆ.

(ಪಕ್ಷೇತರ ಸದಸ್ಯರಾದ ಶ್ರೀ ಪಾಟಾಳ್‌ನಾಗರಾಜ್ ಅವರು ಸಭಾ ತ್ಯಾಗಮಾಡಿದರು)

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ಐದು ಹುಲಿಗಳು ಸತ್ತಿವೆ ಎಂದು ಸರ್ಕಾರದ ವರದಿ ಕೊಟ್ಟಿದೆ. ಅದು ಬಹಳ ಸುಳ್ಳು ವರದಿ ಆಗಿದೆ ಒಟ್ಟು ಒಂಬತ್ತು ಹುಲಿಗಳು ಸತ್ತಿದೆ. ನಾಗರ ಹೊಳೆ ಅಭಯಾರಣ್ಯದಲ್ಲಿ ರೀಸರ್ಚ್ ಮಾಡಬೇಕು ಎಂಬ ನಿಯಮ ಏನು ಇತ್ತೋ ಅಲ್ಲಿ ಹುಲಿ ಸತ್ತಿಲ್ಲ. ಎಲ್ಲಾ ಸತ್ತಿರುವುದು ಹೆಗ್ಗಡದೇವನ ಕೋಟೆ ತಾಲ್ಲೂಕು ಸಂಕದ ಕಟ್ಟೆಯಲ್ಲಿ ಮತ್ತು ಅಂತರ ಸಂತೆ ಹೋಬಳಿಯಲ್ಲಿ ಸುಮಾರು ೭-೮ ಹುಲಿಗಳು ಸತ್ತಿವೆ. ಇಲ್ಲಿ ಸತ್ತು ಹೋಗಿರುವುದನ್ನು ತೆಗೆದುಕೊಂಡು ಹೋಗಿ ಅಲ್ಲಿ ಸತ್ತಿದೆ ಎಂದು ಅವರು ಹೇಳಿದ್ದಾರೆ ಉಲ್ಲಾಸ್ ಕಾರಂತ್ ಅವರಿಗೆ ಹೆಗ್ಗಡದೇವನ ಕೋಟೆ ತಾಲ್ಲೂಕ ಶಿಕಾರಾಪುರ ಪಕ್ಕದಲ್ಲಿ ೨೦ ಎಕರೆ ಜಮೀನು ಇದೆ. ಅಲ್ಲಿ ನೀಲಗಿರಿ ಸಸಿಗಳನ್ನು ಮತ್ತು ಸರ್ವ ಗಿಡಗಳನ್ನು ಹಾಕಿದ್ದಾರೆ. ಅವರು ಪ್ರತಿ ದಿನ ಮೈಸೂರಿಗೆ ಬಂದು ಹೋಗುತ್ತಾರೆ. ರೀಸರ್ಚ್ ಮಾಡುವಾಗ ಶಿಕಾರಿ ಮಾಡುವುದು ಸಹ ಒಂದು ವಾಡಿಕೆ. ಹುಲಿ ಸಿಕ್ಕರೆ ಹುಲಿ ಶಿಕಾರಿ ಮಾಡುತ್ತಾರೆ. ಅದನ್ನು ಸಾಯಿಸುತ್ತಾರೆ. ಹಾಗೆ ಯಾವ ಪ್ರಾಣಿ ಸಿಕ್ಕರೆ ಅದನ್ನು ಸಾಯಿಸುವ ಅಭ್ಯಾಸ ಆಗಿದೆ. ಮಾನ್ಯ ಮಂತ್ರಿಗಳು ಹೇಳಿದರು, ನಾವು ತಪ್ಪಿನಿಂದ ವರದಿ ತರಿಸುತ್ತೇವೆ, ತನಿಖೆ ಮಾಡುತ್ತೇನೆ. ಎಂದು. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಪ್ಪಿನಿಂದ ವರದಿಯನ್ನು ತರಿಸಿದರೆ ಅವರ ಮೇಲೆ ಯಾವ ರೀತಿಯ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಯಾಕೆಂದರೆ ಅವರು ಬಹಳ ಶಕ್ತಿವಂತರಾಗಿದ್ದಾರೆ. ಮತ್ತು ಅವರಿಗೆ ಸಾಕಷ್ಟು ಪ್ರಭಾವ ಇದೆ. ಅವರ ಸೋದರ ಮಾವ ಶಾಮ ಸುಂದರ್ ಎಂಬುವವರು ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಆಗಿದ್ದರು. ಅವರು ಅಧಿಕಾರಿಗಳ ಮೇಲೆ ಪ್ರಭಾವ ಬೀರುತ್ತಾರೆ. ಆದ್ದರಿಂದ ವರದಿಯನ್ನು ಸರಿಯಾದ ರೂಪದಲ್ಲಿ ಕೊಡಿಸುವುದಿಲ್ಲ.

(ಗೊಂದಲ)

ಇವೊತ್ತು ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ಕಡೆ ಹೋದರೆ ಎಲ್ಲ ರೈತರೂ ಹೇಳಂತ್ತಾರೆ, ಇವರು ಎಷ್ಟು ಹುಲಿಗಳನ್ನು ಸಾಯಿಸಿದ್ದಾರೆ ಎಂದು, ಯಾವ ಯಾವ ಪ್ರಾಣಿಗಳನ್ನು ಸಾಯಿಸಿದ್ದಾರೆ. ಇವರ ಹವ್ಯಾಸ ಏನು, ಇವರ ಚಟುವಟಿಕೆ ಏನು ಇನ್ನೂ ಏನೇನು ಮಾಡಿದ್ದಾರೆ ಎಂದು ಸಂಪೂರ್ಣವಾಗಿ ರೈತರು ಬೇಳುತ್ತಾರೆ. ಆದರೆ ಅಧಿಕಾರಿಗಳು ತನಿಖೆಗೆ ಹೋದಾಗ ರೈತರು ಹೇಳಿದ್ದು ಬರೆದು ಕೊಳ್ಳುವುದಿಲ್ಲ. ಆದರಿಂದ ಪ್ರಯೋಜನ ಆಗುವುದಿಲ್ಲ. ಆಮೇಲೆ ವರದಿ ಓದುತ್ತಾರೆ. ಏನೂ ನಡೆದೇ ಇಲ್ಲ ಎಂದು ಆದ್ದರಿಂದ ಸದನದ ಸಮಿತಿ ಮಾಡಿ. ಅಧಿಕಾರಿಗಳನ್ನು ಶಾಸಕರನ್ನು ಹಾಕಿ ಅಲ್ಲಿಗೆ ಕಳುಹಿಸಿದರೆ ಸಂಪೂರ್ಣವಾಗಿ ವಿಷಯ ಬರುತ್ತದೆ. ಆಗ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುತ್ತದೆ ಕೂಡಲೇ ೧೫ ದಿವಸ ಅಥವಾ ಒಂದು ವಾರದಲ್ಲಿ ನೇಮಕ ಮಾಡಿ. ತಜ್ಞರಿಂದ ತನಿಖೆ ಮಾಡಿಸಿದರೆ ವರದಿಯನ್ನು ಸಂಪೂರ್ಣವಾಗಿ ಸುಳ್ಳು ಕೊಡುತ್ತಾರೆ. ೯ ಹುಲಿಗಳು ಸತ್ತಿದ್ದರೆ ೫ ಎಂದು ಹೇಳಿದ್ದಾರೆ. ಇಡೀ ರೀತಿ ಮುಂದೆಯೂ ಸುಳ್ಳು ವರದಿ ಕೊಡುತ್ತಾರೆ. ಇದರಿಂದ ಪ್ರಯೋಜನ ಆಗುವುದಿಲ್ಲ. ಅವರು ಈ ಸರ್ಕಾರದ ಮೇಲೆ ಸಹ ಪ್ರಭಾವ ಬೀರಿದ್ದಾರೆ. ಅಮೇರಿಕನ್ ಸಂಸ್ಥೆಯವರು ಈ ಸಂಶೋಧನೆಗಾಗಿ ೨೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಕೂಡ ೫೦ ಸಾವಿರ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಇದೆಲ್ಲಾ ಗಲಾಟೆ ಆದ ಮೇಲೆ ನಂತರ ಹೋಗಿದೆ. ಇಲ್ಲದಿದ್ದರೆ ಈ ಸರ್ಕಾರದವರು ಹಣ ಕೊಡುತ್ತಿದ್ದರ ಹಿಂದಿನ ಸರ್ಕಾರದವರು ಕೊಟ್ಟಂತೆ ಈ ಸರ್ಕಾರದವರು ಕೂಡ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದರು ಆಗರೆ ಪೇಪರ್‌ನಲ್ಲಿ ಈ ವಿಷಯಗಳು ಪ್ರಕಟ ಆದವು. ಎರಡು ತಿಂಗಳಿಂದ ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಇದೆಲ್ಲಾ ಪ್ರಕಟ ಆಗಿದ್ದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಸಂಪೂರ್ಣವಾಗಿ ತನಿಖೆ ಮಾಡಬೇಕು ಮತ್ತು ಅವರಿಗೆ ಶಿಕ್ಷೆ ಆಗಬೇಕು. ಇಲ್ಲದಿದ್ದರೆ ಎಲ್ಲ ಪ್ರಾಣಿಗಳನ್ನೂ ಅವರು ಶಿಕಾರಿ ಮಾಡಿ ಸಾಯಿಸುತ್ತಾರೆ. ಸದನದ ಸಮಿತಿಯಿಂದ ತನಿಖೆ ಆಗುವುದು ಸೂಕ್ತ. ಇಲ್ಲದಿದ್ದರೆ ಸರ್ಕಾರ ಸಹಾಯ ಮಾಡಿದೆ ಎಂದು ಸಂಪೂರ್ಣವಾಗಿ ಅರ್ಥ ಆಗುತ್ತದೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಅಲ್ಲಿನ ಸಂಬಂಧಪಟ್ಟ ಅರಣ್ಯ ವಲಯದ ಅಧಿಕಾರಿ ಮತ್ತು...

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ ಉಲ್ಲಾಸ ಕಾರಂತರು ಅವರಿಗೆ ಬೇಕಾದ ಅರಣ್ಯ ಅಧಿಕಾರಿಗಳನ್ನು ಅಲ್ಲಿಗೆ ವರ್ಗ ಮಾಡಿಸಿಕೊಂಡಿದ್ದಾರೆ. ಈಗಲೂ ಸಹ ಅದೇ ರೀತಿ ಮಾಡುತ್ತಾರೆ. ಇನ್ನು ಕೆಲವೇ ದಿವಸಗಳಲ್ಲಿ ವರ್ಗಾವಣೆ ಆಗುವುದಿದೆ.

(ಗೊಂದಲ)

ಶ್ರೀಮತಿ ಚಂದ್ರ ಪ್ರಭಾ ಅರಸ್.—ಸರ್ಕಾರ ಈ ಬಗ್ಗೆ ಒಂದು ಆದೇಶ ಕೊಡಬೇಕು. ತಜ್ಞರ ಮತ್ತು ಉನ್ನತ ಮಟ್ಟದ ಸಮಿತಿ ನೇಮಕ ಮಾಡಬೇಕು. ಏಕೆಂದರೆ ಸಂಬಂಧಪಟ್ಟ ಅಧಿಕಾರಿಗಳು ಹೆದರುತ್ತಿದ್ದಾರೆ. ಅಧಿಕಾರಿಗಳು ಸತ್ಯಕ್ಕೆ ದೂರವಾದ ವರದಿಯನ್ನು ಕಳಿಸುತ್ತಾರೆಂಬ ಸಂಶಯ ನಮಗೆ ಇರುವುದರಿಂದ ತಾವು ದಯವಿಟ್ಟು ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಬೇಕು ಇದರಲ್ಲಿ ವಿಜ್ಞಾನಿಗಳನ್ನು ಒಳಗೊಂಡಂತೆ ಒಂದು ಸಮಿತಿ ರಚನೆ ಮಾಡಬೇಕು ಎಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಹೆಗ್ಗಡ ದೇವನ ಕೋಟೆ, ನನ್ನ ಕ್ಷೇತ್ರ ಅಲ್ಲಿ ಈ ಘಟನೆ ನಡೆದಿದೆ. ಇದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ರೈತರ ಸಂಘದ ಪತ್ರಿಕೆಗಳಲ್ಲಿ, ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಈ ವಿಷಯ ಪ್ರಕಟ ಆಗಿದೆ. ಮೂರು ತಿಂಗಳಿಂದ ಈ ಬಗ್ಗೆ ಗಲಾಟೆ ಆಗುತ್ತಿದೆ. ಇವರು ಬಹಳ ಪ್ರಭಾವಯುತರಾಗಿರುವುದರಿಂದ ಯಾರೂ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಸದನದ ಸಮಿತಿ ಮಾಡುವ ಅವಶ್ಯಕತೆ ಇಲ್ಲ. ಕಾನೂನು ಪ್ರಕಾರ ಯಾರು ತಪ್ಪಿಸ್ಥರು ಇದ್ದಾರೆ, ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ತಜ್ಞರ ಸಮಿತಿ ಎಂದರೆ ಈ ಸರ್ಕಾರ ಶಾಮೀಲು ಆಗಿದೆ. ಜೊತೆಗೆ ಸರ್ಕಾರದ ಈ ಮಂತ್ರಿಗಳೂ ಶಾಮೀಲು ಆಗಿದ್ದಾರೆ ಎಂದು ನಾನು ಹೇಳುತ್ತೇನೆ.

(ಗೊಂದಲ)

SRI B. BASAVALINGAPPA —I retute the allegations. He cannot talk anything and.....

(interruption)

ಅಧ್ಯಕ್ಷರು.—ಮಿಸ್ಟರ್ ವೆಂಕಟೇಶ್ ... ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ರೂಲಿಂಗ್ ಕೊಡಲು ತಾವು ಅವಕಾಶವನ್ನೇ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಎಂ. ಮಹದೇವ್ —ಪಾಯಿಂಟ್ ಆಫ್ ಆರ್ಡರ್ ಸರ್.

ಅಧ್ಯಕ್ಷರು.—ದಯವಿಟ್ಟು ತಾವೆಲ್ಲರೂ ಕೂಳಿತುಕೊಳ್ಳಬೇಕು. ನಾನು ರೂಲಿಂಗ್ ಕೊಡುತ್ತಾ ಇದ್ದೇನೆ ಕುಳಿತುಕೊಳ್ಳಿ. ಶಿವಕುಮಾರ್ ಕುಳಿತುಕೊಳ್ಳಿ, ಮಹದೇವ್ ಕುಳಿತುಕೊಳ್ಳಿ. ನನಗೆ ನೀವು ಅವಕಾಶವನ್ನೇ ಕೊಡುತ್ತಾ ಇಲ್ಲ.

(ಗೊಂದಲ)

MR. SPEAKER.—I call the House to order.

ಮಾನ್ಯ ವಂಕಟೇಶ್, ನೀವು ನೇರವಾಗಿ ಸಚಿವರೇ ಶಾಮೀಲಾಗಿದ್ದಾರೆ ಹಾಗೆ ಎಂದು ಹೇಳಿ ಪೂರ್ವಭಾವಿಯಾಗಿ ನನಗೆ ಯಾವ ಸೂಚನೆಯನ್ನು ಕೊಡದೆ ತಾವು ಈ ರೀತಿ ಆರೋಪಣೆ ಮಾಡತಕ್ಕದ್ದು ಸರಿಯಲ್ಲ, ಅದನ್ನು ರೆಕಾರ್ಡಿನಿಂದ ತೆಗೆದುಹಾಕುತ್ತಾ ಇದ್ದೇನೆ.

SRI B. BASAVALINGAPPA.—He makes reckless allegations. He cannot do that.

(Interruption)

ಅಧ್ಯಕ್ಷರು.—ಮಂತ್ರಿಗಳು ಈ ಬಗ್ಗೆ ಪೂರ್ಣ ಪ್ರಮಾಣದ ತನಿಖೆ ಮಾಡುತ್ತೇವೆ, ತಪ್ಪಿತಸ್ಥರಾರು ಯಾರು ಇದ್ದಾರೆ ಅವರ ಮೇಲೆ ವರದಿ ಬಂದ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಜವಾಬ್ದಾರಿ ಸ್ಥಾನದಲ್ಲಿ ಕುಳಿತು, ಜವಾಬ್ದಾರಿಯುತವಾದಂಥ ಹೇಳಿಕೆಯನ್ನು ಕೊಟ್ಟಮೇಲೂ ಈ ರೀತಿ ಅತಿರೇಕವಾದಂಥ ಟೀಕೆಗಳನ್ನು ಮಾಡತಕ್ಕದ್ದು ಸರಿಯಲ್ಲ. ನೀವು ಹೊಸ ಸದಸ್ಯರಿದ್ದೀರಿ. ಆವೇಶ ಎಲ್ಲರಿಗೂ ಬರುತ್ತದೆ. ಆವೇಶದ ಭರದಲ್ಲಿ ಎಲ್ಲರನ್ನೂ ಕೂಡ ಈ ರೀತಿ ನಿಂದನೆ ಮಾಡತಕ್ಕದ್ದು ಸರಿಯಲ್ಲ. ಈ ಪ್ರಶ್ನೆ ಇಲ್ಲಿಗೆ ಮುಗಿಯಿತು.

ಈಗ ಸದನ ಪುನಃ ಮಧ್ಯಾಹ್ನ ಎರಡು ಗಂಟೆ ಐದು ನಿಮಿಷಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ ೧ ಗಂಟೆ ೫೫ ನಿಮಿಷಕ್ಕೆ ಮೇಲೆದ್ದು ಪುನಃ ೨ ಗಂಟೆ ೫ ನಿಮಿಷಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು ಪುನಃ ೨-೦೫ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷಿಣಿ ಸುಮರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಿಯಮ 334ರ ಮೇರೆಗೆ

(1) ಉಳ್ಳಾಲ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಅಕ್ರಮ ಸಾಗುವಳಿ ಮಾಡುವವರಿಗೆ ಹಕ್ಕುಪತ್ರ ದೊರಕಿಸಲು ಒತ್ತಾಯ

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಸಾವಿರಾರು ಬಡವರು ಅಕ್ರಮವಾಗಿ ಜಮೀನಿನಲ್ಲಿ ಕುಳಿತುಕೊಂಡು ಮನೆ ಕಟ್ಟಿ ಕೃಷಿ ಮಾಡಿಕೊಂಡು ಬಂದಿರುತ್ತಾರೆ. ನನ್ನ ಉಳ್ಳಾಲ ಕ್ಷೇತ್ರದಲ್ಲಿ ಸಾವಿರಾರು ಅಕ್ರಮ ಜಮೀನು ಪಡೆದು ವಾಸಿಸುವವರಿದ್ದಾರೆ. ಇದರಲ್ಲಿ ಬಡ ಕಾರ್ಮಿಕರಿದ್ದಾರೆ, ಮಧ್ಯಮ ವರ್ಗದವರಿದ್ದಾರೆ. ಕೂಲಿಗಾರರಿದ್ದಾರೆ. ಆದರೆ ಅನೇಕ ವರ್ಷಗಳಿಂದ ಅಕ್ರಮವಾಗಿ ಕುಳಿತವರಿಗೆ ಇನ್ನೂ ಹಕ್ಕುಪತ್ರ ಸಿಕ್ಕಿಲ್ಲ. ಅಕ್ರಮ ಸಕ್ರಮವಾಗಿಲ್ಲ. ಆದಕಾರಣ ಅಕ್ರಮ ಕುಳಿತ ಜಮೀನನ್ನು ಸಕ್ರಮ ಮಾಡಿ ಹಕ್ಕುಪತ್ರ ಕೊಡುವ ಕೆಲಸವನ್ನು ಸರ್ಕಾರ ಜರೂರಾಗಿ ಮಾಡಬೇಕಾಗಿದೆ. ಅತಿ ಶೀಘ್ರ ಮಾಡಲಾಗುವುದೇ ? ಈ ಕುರಿತು ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.